ಪಂಚಮ

ಸಂಪುಟ-11
ಸಂಚಿಕೆ-18 19
ಬೆಲೆ 1 ರೂ

ಡಿಸೆಂಬರ್ 1987



ಡಾ॥ ಬಿ.ಆರ್. ಅಂಬೇಡ್ಕರ್‌ರ 'ಹಿಂದೂ ವಿರೋಧಾಭಾಸಗಳು, ಪುಸ್ತಕದ ಸಂಪುಟವನ್ನು ಮಹಾರಾಷ್ಟ್ರ ಸರ್ಕಾರ ತಡೆಹಿಡಿದಿದೆ ಹಾಗೂ ಮರಾಠಾ ಮಹಾ ಸಂಘ ಶಿವಸೇನೆ ಮುಂತಾದ ಮತೀಯ ಶಕ್ತಿಗಳಿಗೆ ಶರಣು ಹೋಗಿದೆ. ಅಭಿವ್ಯಕ್ತಿ ಮತ್ತು ವಿಚಾರ ಸ್ವಾತಂತ್ರ್ಯವನ್ನು ಬಗ್ಗು ಬಡಿದಿದೆ. ಆ ಕುರಿತು ವರದಿ ಹಾಗೂ ಪ್ರಜ್ಞಾವಂತರ, ಮತೀಯ ನಾಯಕರ ಪ್ರತಿಕ್ರಿಯೆಗಳು

(ವರದಿ-ಪುಟ:8,9,10,11)

'ಹಿಂದೂ ವಿರೋಧಾಭಾಸಗಳು' ಮತೀಯ ಶಕ್ತಿಗಳ ದಾಂಧಲೆ

ಜಿಲ್ಲಾ ಪರಿಷತ್ ಪಿಕೆಟಿಂಗ್: ಸಾವಿರಾರು ಬಂಧನ

ಅಂಬೇಡ್ಕರ್ ಸ್ಮರಣೆಯ ದಿನವನ್ನು (ಡಿಸೆಂಬರ್6) ದಲಿತರ ಸ್ವಾಭಿಮಾನಿ ಹೋರಾಟ ದಿನವನ್ನಾಗಿ ಆಚರಿಸಬೇಕೆಂದು ದ.ಸಂ.ಸ. ರಾಜ್ಯ ಸಮಿತಿ ಕರೆ ನೀಡಿತ್ತು. ದ.ಸಂ.ಸ. 'ಹೆಂಡಬೇಡ-ವಸತಿಶಾಲೆಬೇಕು' ಎಂಬ ಘೋಷಣೆಯನ್ನು ಮುಂದಿಟ್ಟುಕೊಂಡು, ರಾಜ್ಯಾದ್ಯಂತ ಜಿಲ್ಲಾ ಪರಿಷತ್ ಕಚೇರಿಗಳನ್ನು ಪಿಕೆಟಿಂಗ್ ಮಾಡಿತು. ಸಾವಿರಾರು ಕಾರ್ಯಕರ್ತರು ಬಂಧನಕ್ಕೊಳಗಾದರು.

(ವರದಿ-ಪುಟ:2,3,15,16.)

ಹಾಸನ

ಆಲೂರಿನಿಂದ ಹೊರಟ ದಲಿತ ಸಂಘರ್ಷ ಸಮಿತಿಯ ಜಾಥಾ, ಇಂದು ಬೆಳಗ್ಗೆ 11 ಗಂಟೆಗೆ ನಗರವನ್ನು ತಲುಪಿ ಜಿಲ್ಲಾ ಪರಿಷತ್ ಕಚೇರಿಯ ಮುಂದೆ ಐತಿಹಾಸಿಕ ನಿರ್ಧಾರದ ಪಿಕೆಟಿಂಗ್ ಚಳುವಳಿಯನ್ನು ಪ್ರಾರಂಭಿಸಿತು.

ಜಾಥಾವನ್ನು ಉದ್ದೇಶಿಸಿ ಮಾತನಾಡಿದ ದ.ಸಂ.ಸ. ರಾಜ್ಯ ಸಂಚಾಲಕ ಚಂದ್ರಪ್ರಸಾದ್ ತ್ಯಾಗಿಯವರು, "ನಮಗೆ ಬೇಡ, ಹೋಬಳಿಗೊಂದು ವಸತಿ ಶಾಲೆ ಕೊಡಿ" ಎಂದು ಸರ್ಕಾರವನ್ನು ಆಗ್ರಹಪಡಿಸಿದರು.

ಹೆಂಡವನ್ನೇ ಆರ್ಥಿಕ ಉತ್ಪನ್ನವಾಗಿಟ್ಟುಕೊಂಡು ಹರಿಜನರಿಗೆ ಕಾಲೋನಿಗೆ ಒಂದರಂತೆ ಹೆಂಡದಂಗಡಿಯನ್ನು ಸ್ಥಾಪಿಸಿ ವಿಷದ ಹೆಂಡ ಮಾರಿ ದಲಿತರನ್ನು ಕೊಲೆಗೈಯುತ್ತಿವೆ ಎಂದು ಸರ್ಕಾರಕ್ಕೆ ಛೀಮಾರಿ ಹಾಕಿದ ತ್ಯಾಗಿ, ಹೆಗಡೆ ಸರ್ಕಾರ ಹೆಂಡದ ಸರ್ಕಾರವೆಂದು ವ್ಯಂಗ್ಯವಾಡಿದರು.

ರಾಮರಾಜ್ಯ, ದಲಿತೋದ್ಧಾರದ ಘೋಷಣೆಯ ಹಿಂದೆ ಹೆಂಡ ದಲ್ಲಾಳಿಗಳ ನೆರವಿನಿಂದ ಆಡಳಿತ ನಡೆಸುತ್ತಿರುವ ಜನತಾ ಸರ್ಕಾರ ಕೆಳಗಿಳಿಯಲಿ ಎಂದು ಒತ್ತಾಯಪಡಿಸಿದ ತ್ಯಾಗಿ, ಕಾನೂನು ಬಾಹಿರವಾಗಿ ಹೆಂಡದ ಅಂಗಡಿಗಳನ್ನು ಪ್ರತಿ ಹರಿಜನ ಕಾಲೋನಿಗಳಲ್ಲಿ ಇಡಲಾಗಿದೆ ಎಂದು ತಿಳಿಸಿದರು.

ನಿನ್ನೆ ಜಿಲ್ಲೆಯ ವಿವಿಧೆಡೆಗಳಿಂದ ಬಂದು ಆಲೂರು ಪ್ರೌಢಶಾಲೆಯ ಹಾಸ್ಟೆಲ್ ಮೈದಾನದಲ್ಲಿ ಸೇರಿಕೊಂಡ ದ.ಸಂ.ಸ.ದ ಕಾರ್ಯಕರ್ತರು, ಇಂದು ಬೆಳಗ್ಗೆ 7 ಗಂಟೆಗೆ ತಮ್ಮ ಕಾಲ್ನಡಿಗೆಯ ಜಾಥಾವನ್ನು ಪ್ರಾರಂಭಿಸಿ ನಗರ ತಲುಪಿದರು.

ಪಿಳ್ಳಾಸಿ ಮತ್ತು ಪೊರಕೆಯ ಲಾಂಛನದ ಹಿಂದೆ ಹೊರಟ 'ಹೆಂಡ ಬೇಡ ವಸತಿ ಶಾಲೆ ಬೇಕು' "ಹೆಂಡದ ಹೆಗಡೆ ಸರ್ಕಾರಕ್ಕೆ ಧಿಕ್ಕಾರ" "ಹೆಂಡ ನಿಲ್ಲಿಸಿ ದಲಿತರ ಪ್ರಾಣ ಉಳಿಸಿ" ಮುಂತಾದ ಘೋಷಣೆಗಳು ಮಾರ್ಗದುದ್ದಕ್ಕೂ ಮುಗಿಲು ಮುಟ್ಟಿ, ಹೊಸ ಹುರುಪಿನೊಂದಿಗೆ, ಹೊಸ ಬದುಕಿನ ಗತಿಯ ಚಾಲನೆ ನೀಡಿದ್ದವು.

ಮಹಿಳೆಯರೂ ಸೇರಿದಂತೆ ಸುಮಾರು ಒಂದು ಸಾವಿರ ಕಾರ್ಯಕರ್ತರಿದ್ದ ಈ ಜಾಥಾ ನಗರದ ಸರಹದ್ದಿಗೆ ಬರುವ ಹೊತ್ತಿಗೆ ಸುಮಾರು ಬೆಳಗ್ಗೆ 10 ಗಂಟೆಯಾಗಿತ್ತು.

ನಗರದ ಸಂತೇಪೇಟೆಯ ಸರ್ಕಲ್ ಮುಖಾಂತರ ಹೊಸ ಲೈನ್ ರಸ್ತೆ, ಹೇಮಾವತಿ ಪ್ರತಿಮೆ, ನರಸಿಂಹರಾಜ ವೃತ್ತದಿಂದ ಜಿಲ್ಲಾ ಪರಿಷತ್ ಕಚೇರಿಗೆ ಹರಿದು ಹೋದ ಜಾಥಾ ಮಾರ್ಗದ ಎರಡೂ ಬದಿಯಲ್ಲಿದ್ದ ಜನರನ್ನು ನಿಬ್ಬೆರಗುಗೊಳಿಸಿತ್ತು.

ಜಿಲ್ಲಾ ಪರಿಷತ್ ಕಚೇರಿಯ ಮುಂದೆ ದಲಿತ ಸಂಘರ್ಷ ಸಮಿತಿಯ ಸಾಂಸ್ಕೃತಿಕ ತಂಡವೊಂದು, 'ಹೆಗಡೆಯ ರಾಜ್ಯದಲಿ ಅನ್ಯಾಯ ಅತ್ಯಾಚಾರ, ಘೋರ ವಣ್ಣ, ಇದು ಯುಗಧರ್ಮನ ಬಾಧೆಯಣ್ಣ' ಹಾಗು 'ಕಾರು ಹಿಂದೆ ಕಾರು ಹದಿನಾರು ಕಾರಿನೊಳಗೆ, ಯಾವ ಕಾರಲ್ಲಿ ಬತ್ತೀಯೋ ನೀನು ಬಿಡಿ ಬಸವರಾಜ' ಎಂಬ ಹೋರಾಟದ ಹಾಡುಗಳು ಇಡೀ ಜನಸ್ತೋಮ ಮಂತ್ರ ಮುಗ್ಧಗೊಂಡಿತ್ತು.



ಡಾ॥ ಅಂಬೇಡ್ಕರ್‌ರ ಸ್ಮರಣೆಯ ದಿನವಾದ ಡಿ. 6 ನ್ನು ದಲಿತರ ಸ್ವಾಭಿಮಾನ ಹಾಗೂ ಅರಿವಿನ ಹೋರಾಟದ ದಿನವಾಗಿ ಆಚರಿಸಲು ದ.ಸಂ.ಸ. ರಾಜ್ಯ ಸಮಿತಿ ಕರೆ ನೀಡಿತ್ತು.

'ವಿಷದ ಹೆಂಡ ಬೇಡ– ವಸತಿ ಶಾಲೆ ಕೊಡಿ' ಎಂದು ಒತ್ತಾಯಿಸಲು ಪ್ರತಿ ಜಿಲ್ಲೆಯ ಒಂದೊಂದು ತಾಲೂಕಿನಿಂದ ಕಾಲ್ನಡಿಗೆ ಜಾಥಾ ಆರಂಭಿಸಿ ಡಿ. 8 ರಂದು ಪ್ರತಿ ಜಿಲ್ಲಾ ಕಚೇರಿಯ ಎದುರು ಪಿಕೆಟಿಂಗ್ ಮತ್ತು ಧರಣಿ ನಡೆಸಿತು.

ಸಾವಿರಾರು ಜನ ದ.ಸಂ.ಸ. ಸದಸ್ಯರು ಬಂಧನಕ್ಕೊಳಗಾದರು.

ದ.ಸಂ.ಸ.ದ ಕಾರ್ಯಕರ್ತರು ತಮ್ಮ ಘೋಷಣೆಗಳೊಂದಿಗೆ ಪಿಕೆಟಿಂಗ್ ಪ್ರಾರಂಭಿಸಿದ ಕೂಡಲೇ ಪೊಲೀಸರು ಲಾರಿ ಮತ್ತು ವ್ಯಾನುಗಳನ್ನು ತಂದು ಅವರನ್ನು ಬಂಧಿಸಿ ಪೊಲೀಸ್ ಅಡಿಟೋರಿಯಂಗೆ ಕರೆದೊಯ್ದರು.

ಬಂಧಿತ ದಲಿತ ಕಾರ್ಯಕರ್ತರನ್ನು ಭೇಟಿ ಮಾಡಿದ ಕ.ರಾ. ರೈತ ಸಂಘದ ಸಾಂಸ್ಕೃತಿಕ ವಿಭಾಗದ ಸಂಚಾಲಕ ಡಾ॥ ಹಿ.ಶಿ. ರಾಮಚಂದ್ರೇಗೌಡ ಅವರು ದಲಿತರ ಹೋರಾಟಕ್ಕೆ ಬೆಂಬಲ ಸೂಚಿಸಿ ಮಾತನಾಡಿದರು.

ಮಧ್ಯಾಹ್ನದ ಉಪಹಾರವಾಗಿ ಬಂಧಿತರೆಲ್ಲರಿಗೂ ಪೊಲೀಸರು 3 ಮೂಟೆಯಲ್ಲಿ ಪುರಿ ತಂದು ಹಂಚಿದರು.

ದ.ಸಂ.ಸ.ದ ರಾಜ್ಯ ಸಂಚಾಲಕ ಚಂದ್ರಪ್ರಸಾದ್ ತ್ಯಾಗಿ, ಕೆ.ಟಿ. ಶಿವಪ್ರಸಾದ್, ಜಯರಾಂ ಅಣ್ಣಯ್ಯ, ದಲಿತ ವಿದ್ಯಾರ್ಥಿ ಒಕ್ಕೂಟದ ಸದಸ್ಯರು ಮಹಿಳಾ ಕಾರ್ಯಕರ್ತರು ಮತ್ತು ಮಕ್ಕಳು ಪಿಕೆಟಿಂಗ್‌ನಲ್ಲಿ ಭಾಗವಹಿಸಿದ್ದ ಪ್ರಮುಖರಾಗಿದ್ದರು.

ಕೃಪೆ : ಜನತಾ ಮಾಧ್ಯಮ

ಕನ್ನಂಬಾಡಿಯನ್ನೇ

ಮಂಡ್ಯ

'ಏನಿದು ರಾಜ್ಯ ಏನಿದು ರಾಜ್ಯ. ಹೆಗಡೆ ರಾಜ್ಯ ಹೆಂಡದ ರಾಜ್ಯ:' 'ಬೇಡ ಬೇಡ, ಹೆಂಡ ಬೇಡ ಬೇಕೇ ಬೇಕು ವಸತಿ ಶಾಲೆ' ಎಂಬ ಘೋಷಣೆಗಳನ್ನು ಕೂಗುತ್ತಾ ತುಂತುರು ಮಳೆಯಲ್ಲೇ ಪಾಂಡವಪುರ ಬೀದಿಗಳಲ್ಲಿ ಸಾಗಿದ ದ.ಸಂ.ಸ ಕಾಲ್ನಡಿಗೆ ಜಾಥಾವನ್ನು ಮಂಡ್ಯ ಜಿಲ್ಲಾ ರೈತಸಂಘದ ಅಧ್ಯಕ್ಷ ಪುಟ್ಟಣ್ಣಯ್ಯ ಉದ್ಘಾಟಿಸಿದರು.

ಪಾಂಡವಪುರದ ಬಾಬುರಾಯನ ಕೊಪ್ಪಲವರೆಗೆ ಕತ್ತಲೆಯಲ್ಲೇ ಮಳೆಯಲ್ಲಿ ನೆನೆದು ಬಂದ ದ.ಸಂ.ಸ ಜಾಥಾ ಕಾರ್ಯಕರ್ತರಿಗೆ ರೈತಸಂಘದವರೇ ಊಟ ಮತ್ತು ವಸತಿ ವ್ಯವಸ್ಥೆ ಮಾಡಿದ್ದರು. ಡಿ. 7ರ ಬೆಳಗ್ಗೆ ರೈತ ಸಂಘದವರಿಂದ ಬೀಳ್ಕೊಂಡು ಹೊರಟ ಜಾಥಾ ಕೆ. ಶೆಟ್ಟಹಳ್ಳಿ ತಲುಪಿತು. ಅಲ್ಲಿ ಗ್ರಾಮಸ್ಥರ ನೆರವಿನೊಂದಿಗೆ ರಂಗನಾಥ್ ಕುಮಾರ್ ಊಟದ ವ್ಯವಸ್ಥೆ ಮಾಡಿದ್ದರು.



ಜಿಲ್ಲಾ ಪರಿಷತ್ ಪಿಕೆಟಿಂಗ್ !

ಸಾವಿರಾರು ಬಂಧನ

ಚಿಕ್ಕಮಗಳೂರು

ಮೂಡಿಗೆರೆ ತಾಲ್ಲೂಕಿನಿಂದ ಹೊರಟ ಜಾಥಾ ಚಿಕ್ಕ ಬುಕ್ಕ ಸಾಗರ, ಬಾಣೂರು, ಸಕ್ರೆಪಟ್ಟಣ, ಹಿರೆಗೌಜ ಕುರುವಂಗಿ, ಬಳೇಕಲ್ಲು ಹಾಗೂ ದಂಟರಮಕ್ಕಿ ಮಾರ್ಗವಾಗಿ ಚಿಕ್ಕಮಗಳೂರಿಗೆ ಬಂದರೆ, ಕಡೂರು ತಾಲೂಕಿನಿಂದ ಹೊರಟ ಜಾಥಾವು ಪಾಂದಿ ಆಲ್ದೂರು, ಕೂದುವಳ್ಳಿ, ಬಾಚಗನಹಳ್ಳಿ ಮುಂತಾದ ಗ್ರಾಮಗಳನ್ನು ಹಾದು ಜಿಲ್ಲಾಕೇಂದ್ರಕ್ಕೆ ಬಂತು.

ಎರಡೂ ಕಡೆಯಿಂದಲೂ ಸುಮಾರು ಎರಡು ಸಾವಿರಕ್ಕೂ ಹೆಚ್ಚು ಜನ ಅಜಾದ್ ಪಾರ್ಕಿನಲ್ಲಿ ಸಭೆ ಸೇರಿ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಜಿಲ್ಲಾ ಪರಿಷತ್ ಕಚೇರಿಯ ಮುಂದೆ ಸೇರಿ ಪಿಕೆಟಿಂಗ್ ಧರಣಿ ನಡೆಸಿ ಅಧ್ಯಕ್ಷರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ದಲಿತ ಸಂಘರ್ಷ ಸಮಿತಿಯ ಜಾಥಾವನ್ನು ರೈತ ಸಂಘವು ಬೆಂಬಲಿಸಿತ್ತು. ಸಭೆಯಲ್ಲಿ ಸೇರಿದ ದಲಿತರು ಹೆಂಡ ಕುಡಿಯುವುದಿಲ್ಲವೆಂದು ಪ್ರತಿಜ್ಞೆ ಮಾಡಿದರು.

ರಾಯಚೂರು

ರಾಯಚೂರು. ಡಿ. 8.

ಡಿ. 6 ರಂದು 'ಆಸ್ಕಿಹಾಳ' ಗ್ರಾಮದಿಂದ ಕಾಲ್ನಡಿಗೆ ಜಾಥಾ ಪ್ರಾರಂಭವಾಯಿತು.

ಡಿ. 8ರಂದು ಎಲ್ಲಾ ತಾಲ್ಲೂಕುಗಳಿಂದ ಬಂದಿದ್ದ 3000 ಜನ ದ.ಸಂ.ಸ. ಸದಸ್ಯರು ಜಿಲ್ಲಾ ಪರಿಷತ್ ಕಚೇರಿಯ ಎದುರು ನೆರೆದು ಪಿಕೆಟಿಂಗ್ ನಡೆಸಿದರು. ಒಂದು ಸಾವಿರಕ್ಕೂ ಹೆಚ್ಚು ಜನರನ್ನು ಪೊಲೀಸರು ಬಂಧಿಸಿದ್ದರು. ಬಂಧಿತರನ್ನು ರಾತ್ರಿ 8 ಗಂಟೆ ಸುಮಾರಿಗೆ ಬಿಡುಗಡೆಮಾಡಿದರು. ಪೊಲೀಸರು ಕಾರ್ಯಕ್ರಮದ ವೇಳೆ, ಹಾಗೂ ಬಂಧನದ ಸಮಯದಲ್ಲಿ ಅಸಭ್ಯವಾಗಿ ನಡೆದುಕೊಂಡರು. ಅನಗತ್ಯ ದೌರ್ಜನ್ಯ ತೋರಿದರು. ಪೊಲೀಸರ ಈ ನಡವಳಿಕೆಗೆ ಸಂಬಂಧಿಸಿದ ದ.ಸಂ.ಸ ಈಗಾಗಲೆ ತನ್ನ ಪ್ರತಿಭಟನೆಯನ್ನು ವ್ಯಕ್ತಪಡಿಸಿದೆ.

ಹನುಮದಾಸ್, ರಾಯಚೂರು

ಹೆಂಡ ಮಾಡುತ್ತಾರೆ!

ಅಲ್ಲಿಂದ ಹೊರಟ ಜಾಥಾ ನೇರವಾಗಿ ಸಂಜೆ 6 ಗಂಟೆಗೆ ಸುಂಡಹಳ್ಳಿಯನ್ನು ತಲುಪಿತು. ಊರಿನ ಮುಂಭಾಕ್ಕೇ ಗ್ರಾಮದ ಕೆಲವು ಮುಖ್ಯಸ್ಥರು ಹೆಂಗಸರು ಮಕ್ಕಳಾದಿಯಾಗಿ ಬಂದು ದ.ಸಂ.ಸ ಮುಖಂಡರಿಗೆ ತಾಂಬೂಲ ಮತ್ತು ನಿಂಬೇಹಣ್ಣು ನೀಡಿ ನಿಮ್ಮ ಹೋರಾಟಕ್ಕೆ ಜಯವಾಗಲೆಂದು ಹರಸಿ ಸ್ವಾಗತಿಸಿದರು.

ಯರಹಳ್ಳಿ ಲಿಂಗಪ್ಪ, ಚಿಕ್ಕದೇವಯ್ಯ ಮತ್ತು ಸುಂಡಹಳ್ಳಿ ನಾಗರಾಜು ಹಾಗೂ ಗ್ರಾಮಸ್ಥರು ಜಾಥಾದಲ್ಲಿ ಬಂದಿದ್ದ ದ.ಸಂ.ಸ. ಕಾರ್ಯಕರ್ತರಿಗೆ ಊಟದ ವ್ಯವಸ್ಥೆ ಮಾಡಿದ್ದರು, ಆ ರಾತ್ರಿ ಸುಂಡಹಳ್ಳಿಯಲ್ಲಿ ತಂಗಿದ್ದ ಜಾಥಾ 8 ರ ಬೆಳಗ್ಗೆ ಉಪಹಾರ ಮುಗಿಸಿಕೊಂಡು ಗ್ರಾಮಸ್ಥರಿಗೆಲ್ಲರಿಗೂ ವಂದಿಸಿ ಅಲ್ಲಿಂದ ಹೊರಟು ಮಂಡ್ಯ ನಗರವನ್ನು ತಲುಪಿತು.

ಮಂಡ್ಯದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆಸಿದ ಜಾಥಾ ಮಧ್ಯಾಹ್ನ 1 ಗಂಟೆಗೆ ಜಿಲ್ಲಾ ಕಚೇರಿ ಮುಂಭಾಗ ಬಹಿರಂಗ ಸಭೆ ನಡೆಸಿತು. ಬಹಿರಂಗ ಸಭೆಯಲ್ಲಿ ಮಾತನಾಡಿದ ರಾಜ್ಯ ರೈತ ಸಂಘದ ಉಪಾಧ್ಯಕ್ಷ ಶ್ರೀನಿವಾಸ್ 'ದಲಿತ ಸಂಘರ್ಷ ಸಮಿತಿ ಮತ್ತು ರೈತ ಸಂಘ ಕರ್ನಾಟಕ ಕಂಡ ಎರಡು ಜನಪರ ಚಳವಳಿಗಳು. ಈ ಎರಡೂ ಸಂಘಟನೆಗಳು ಸಹೋದರ ಸಂಘಟನೆಗಳಿದ್ದಹಾಗೆ. ದ.ಸಂ.ಸ ಚಳವಳಿಗೆ ರೈತ ಸಂಘದ ಸಂಪೂರ್ಣ ಬೆಂಬಲವಿದೆ.ಎಂದು ಹೇಳಿದರು. ರೈತಸಂಘದ ಪುಟ್ಟಣ್ಣನವರು "ಹೆಂಡದ ದಲ್ಲಾಳಿಗಳು ಕನ್ನಂಬಾಡಿ ಕಟ್ಟೆಯ ನೀರನ್ನೆಲ್ಲ ಬೇಕಾದರೆ ಹೆಂಡ ಮಾಡಿ ಕಾಲುವೆಗಳಲ್ಲಿ ಹೆಂಡದ ಸರಬರಾಜು ಮಾಡುವಷ್ಟು ಲಜ್ಜೆಗೆಟ್ಟಿದ್ದಾರೆ ಎನ್ನುತ್ತಾ ವಿಷದ ಹೆಂಡದ ದುಷ್ಪರಿಣಾಮಗಳನ್ನು ಜನತೆಗೆ ವಿವರಿಸಿದರು.

ಕೊನೆಯಲ್ಲಿ ಮಾತನಾಡಿದ ದ.ಸಂ.ಸ ಜಿಲ್ಲಾ ಸಂಚಾಲಕರಾದ ಗುರುಪ್ರಸಾದ ಕೆರಗೋಡುರವರು "ಇಡೀ ವಿಷದ ಹೆಂಡದ ಲಾಭದಿಂದ ಅನೈತಿಕ ಆಡಳಿತ ನಡೆಸುತ್ತಿರುವ ಹೆಗಡೆ ನೇತೃತ್ವದ ಜನತಾ ಸರ್ಕಾರವನ್ನು ಟೀಕಿಸುತ್ತಾ ಹಿಂದೆ ಆಗಸ್ಟ್ 14ರಂದು ಮುಖ್ಯಮಂತ್ರಿ ಹೆಗಡೆ ರಾಜ್ಯದ ಪ್ರತಿ ಜಿಲ್ಲೆಯಿಂದ ದ.ಸಂ.ಸದವರು 5 ಬಾಟಲ್ ಹೆಂಡ ಕಳುಹಿಸಿಕೊಟ್ಟಿದ್ದನು ಜನತೆಗೆ ಜ್ಞಾಪಿಸಿದರು. ಸಭೆಯನ್ನುದ್ದೇಶಿಸಿ ಮತ್ತೊಬ್ಬ ಅತಿಥಿ ಅಡ್ವಕೇಟ್ ಎಂ.ಬಿ. ಬಾಲಸುಂದರ್ ಕೂಡ ಮಾತಾಡಿದರು.

ಬಹಿರಂಗ ಸಭೆಯ ನಂತರ ಜಿಲ್ಲಾಪರಿಷತ್ ಕಚೇರಿಯನ್ನೂ ಪಿಕೇಟಿಂಗ್ ಮಾಡಲು ಹೋದ ದ.ಸಂ.ಸ ಸದಸ್ಯರನ್ನು ಪೊಲೀಸರು ಬಂಧಿಸಿದರು. ಪೊಲೀಸರ ಎದುರೇಒಂದು ಪುಟ್ಟಸಭೆ ನಡೆಸಿ ಜಾಥಾದಲ್ಲಿಬಂದಿದ್ದ ಎಲ್ಲಾಕಾರ್ಯಕರ್ತರು ಹಾಗೂ ಹಳ್ಳಿಗಾಡಿನ ದಲಿತರು ನಾವು ಇನ್ನು ಮುಂದೆ ಮದ್ಯಪಾನ ಮಾಡುವುದಿಲ್ಲ. ಮದ್ಯಪಾನ ಮಾಡುವವರನ್ನು ಬೆಂಬಲಿಸುವುದಿಲ್ಲ. ಮತ್ತು ಮದ್ಯಪಾನದ ವಿರುದ್ಧ ಸತತವಾಗಿ ಹೋರಾಡುತ್ತೇವೆಂದು ಪ್ರಮಾಣ ವಚನ ಸ್ವೀಕರಿಸಿದರು. ಕೆರಗೋಡಿನ ಗಜೇಂದ್ರರವರು ಪ್ರಮಾಣವಚನ ಭೋದಿಸಿದರು. ಆ ನಂತರ ಬಂಧಿತರನ್ನು ಸಂಜೆ ಬಿಡುಗಡೆ ಮಾಡಲಾಯಿತು.

ತಮ್ಮ ಜೀವಿತ ಕಾಲದಲ್ಲಿ ಗಾಂಧಿ ಹನ್ನೆರಡಕ್ಕೂ ಹೆಚ್ಚು ಪುಸ್ತಕಗಳನ್ನೂ, ನೂರಾರು ಲೇಖನಗಳನ್ನೂ ಬರೆದಿದ್ದಲ್ಲದೆ, ಸಾವಿರಾರು ಭಾಷಣಗಳನ್ನೂ ನೀಡಿದರು. ಇವೆಲ್ಲವೂ ಅವರು 1908ರಲ್ಲಿ ಪ್ರಕಟಿಸಿದ ಹಿಂದ್ ಸ್ವರಾಜ್ ಅಥವಾ ಭಾರತೀಯ ಸ್ವದೇಶೀ ಆಡಳಿತ ಎನ್ನುವ ಕೃತಿಯ ವಿಸ್ತೃತ ರೂಪಗಳೆಂದು ಹೇಳಬಹುದು. 1919ರಲ್ಲಿ ತಮ್ಮ ಪುಸ್ತಕ ಒಂದರ ಹೊಸ ಆವೃತ್ತಿಗೆ ಮುನ್ನುಡಿ ಬರೆಯುತ್ತಾ, ಪರಿಷ್ಕರಿಸಬೇಕಾದ ಯಾವುದಾದರೂ ಅಂಶವಿದ್ದರೆ ಅದು ತಮ್ಮ ಇಂಗ್ಲಿಷ್ ಸ್ನೇಹಿತನೊಬ್ಬನ ಅಸಂತೋಷಕ್ಕೆ ಕಾರಣವಾದ, ಬ್ರಿಟಿಷ್ ಸಂಸತ್ತನ್ನು ಉದ್ದೇಶಿಸಿ ಬಳಸಿದ "ವೇಶ್ಯೆ" ಎಂಬ ಒಂದೇ ಒಂದು ಪದ ಮಾತ್ರ ಎನ್ನುತ್ತಾರೆ. ತಮ್ಮ ಜೀವನದುದ್ದಕ್ಕೂ ಗಾಂಧಿ ಬದಲಿಸದ ಅಭಿಪ್ರಾಯಗಳನ್ನಿಟ್ಟ ವಿಷಯಗಳಲ್ಲಿ ಒಂದೆಂದರೆ ವೈದ್ಯರು ಲೋಲುಪತೆಯನ್ನೂ, ಪಾಪಕೃತ್ಯಗಳನ್ನೂ, ದುರ್ಮಾರ್ಗಗಳನ್ನೂ ಪ್ರೋತ್ಸಾಹಿಸುತ್ತಾರೆ ಎನ್ನುವುದು. ಅದು ಹೇಗೆ? ಈ ಪ್ರಶ್ನೆಗೆ ಹಿಂದ್ ಸ್ವರಾಜ್ ನಲ್ಲಿ ಈ ರೀತಿಯ ಉತ್ತರ ಕೊಡುತ್ತಾರೆ:

"ರೋಗಗಳು ಹೇಗೆ ಬರುತ್ತವೆ? ನಮ್ಮ ಲೋಲುಪತೆಯಿಂದ ಅಥವಾ ಉದಾಸೀನತೆಯಿಂದ: ಹೆಚ್ಚಾಗಿ ತಿಂದರೆ ಅಜೀರ್ಣವಾಗುತ್ತದೆ. ಆಗ ಡಾಕ್ಟರಲ್ಲಿಗೆ ಹೋಗುತ್ತೇವೆ. ಅವನು ಔಷಧಿಯನ್ನು ಕೊಡುತ್ತಾನೆ. ವಾಸಿಯಾದ ಮೇಲೆ ಮತ್ತೂ ತಿನ್ನುತ್ತೇವೆ. ಗುಳಿಗೆಗಳನ್ನೂ ನುಂಗುತ್ತೇವೆ. ನಾವು ಮೊದಲೇ ಗುಳಿಗೆಗಳನ್ನು ತಿನ್ನದಿದ್ದರೆ ತಕ್ಕ ಶಿಕ್ಷೆಯನ್ನು ಅನುಭವಿಸುತ್ತಿದ್ದವು ಹಾಗೂ ಮತ್ತೊಮ್ಮೆ ಹೆಚ್ಚಾಗಿ ತಿನ್ನುತ್ತಲೂ ಇರಲಿಲ್ಲ. ಡಾಕ್ಟರರ ಮಧ್ಯ ಪ್ರವೇಶದಿಂದ ನಾನು ಲೋಲುಪನಾಗಬೇಕಾಯ್ತು. ಶರೀರದ ಬಾಧೆ ಕಡಿಮೆಯಾದರೂ ಮನಸ್ಸು ದುರ್ಬಲವಾಯ್ತು. ಔಷಧಿಯನ್ನು ತೆಗೆದುಕೊಳ್ಳುತ್ತಲೇ ಇರುವುದರಿಂದ ಮನಸ್ಸಿನ ಮೇಲೆ ಹತೋಟಿಯನ್ನು ಕಳೆದುಕೊಳ್ಳುವುದು ಅನಿವಾರ್ಯ. ದುರ್ಮಾರ್ಗಿಯಾದವನಿಗೆ ರೋಗಬರುತ್ತದೆ. ಡಾಕ್ಟರನು ಗುಣಪಡಿಸುತ್ತಾನೆ. ಆದ್ದರಿಂದ ಇದರಲ್ಲಿನ ವೈಪರಿತ್ಯವೆಂದರೆ ಮತ್ತೆ ಅವನು ದುರ್ಮಾರ್ಗದಲ್ಲಿ ತೊಡಗುತ್ತಾನೆ. ಡಾಕ್ಟರರ ಮಧ್ಯ ಪ್ರವೇಶವಿಲ್ಲದಿದ್ದರೆ ಪ್ರಕೃತಿಯೇ ತನ್ನ ಕೆಲಸ ತಾನು ಮಾಡಿ ಸರಿಮಾಡುತ್ತಿತ್ತು. ಅವನು ದುರ್ಮಾರ್ಗವನ್ನು ಬಿಟ್ಟು ಸಂತೋಷದಿಂದಿರಲು ಸಾಧ್ಯವಿತ್ತು."

ಗಾಂಧಿಯು ಕೇವಲ ವೈದ್ಯನು ಮತ್ತು ಆಸ್ಪತ್ರೆಗಳನ್ನು ಮಾತ್ರವೇ ವಿರೋಧಿಸಲಿಲ್ಲ. ಲಾಯರುಗಳು, ನ್ಯಾಯಾಲಯಗಳು ಹಾಗೂ ರೈಲು ವ್ಯವಸ್ಥೆಯನ್ನು ವಿರೋಧಿಸಿದರು. ರೈಲು ವ್ಯವಸ್ಥೆಯನ್ನು ಕುರಿತ ಅವರ ವಾದವು ಹೀಗಿದೆ:

"ರೈಲು ವ್ಯವಸ್ಥೆ ಇಲ್ಲದಿದ್ದರೆ ಇಂಗ್ಲಿಷರು ನಮ್ಮ ಮೇಲೆ ಇಂತಹ ಹಿಡಿತವನ್ನು ಸಾಧಿಸುವುದು ಸಾಧ್ಯವಿರುತ್ತಿರಲಿಲ್ಲ ಎನ್ನುವುದು ಎಲ್ಲರಿಗೂ ತಿಳಿದ ವಿಷಯ. ರೈಲು ವ್ಯವಸ್ಥೆಯು ಪ್ಲೇಗ್ ವ್ಯಾಧಿಯನ್ನು ಹರಡಲು ಸಹಾಯಕವಾಗಿದೆ. ಅದಿಲ್ಲದೆ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಜನಗಳು ಹೋಗುವುದು ಸಾಧ್ಯವಿಲ್ಲ. ರೈಲ್ವೆ ಪ್ರಯಾಣ ಪ್ಲೇಗ್ ಕ್ರಿಮಿಗಳನ್ನು ಹರಡುತ್ತದೆ. ಹಿಂದೆ ತೀರಾ ಸಹಜವಾದ ವಿಭಜನೆ ನಮ್ಮಲ್ಲಿತ್ತು. ರೈಲು ಸಾಗಾಣಿಕೆಯ ಅನುಕೂಲತೆಯಿಂದಾಗಿ ರೈತರು ಹೆಚ್ಚು ಬೆಲೆ ಸಿಗುವ ಮಾರುಕಟ್ಟೆಗೆ ಆಹಾರ ಸಾಮಗ್ರಿಗಳನ್ನು ಸಾಗಿಸುತ್ತಾರೆ. ಆದ್ದರಿಂದ ಬರಗಾಲ ಪರಿಸ್ಥಿತಿಯು ಈ ರೈಲು ವ್ಯವಸ್ಥೆಯಿಂದ ಹೆಚ್ಚುತ್ತಿದೆ. ಅದು ಮನುಷ್ಯನ ದುಷ್ಪ್ರವೃತ್ತಿಗಳಿಗೆ ಉತ್ತೇಜನ ನೀಡುವಂಥದು. ದುಷ್ಟರು ತ್ವರಿತಗತಿಯಿಂದ ತಮ್ಮ ದುರುದ್ದೇಶಗಳನ್ನು ರೈಲು ವ್ಯವಸ್ಥೆಯ ಮೂಲಕ ಸಾಧಿಸಲು ಸಾಧ್ಯವಾಗಿದೆ. ನಮ್ಮ ಪವಿತ್ರ ಯಾತ್ರಾಸ್ಥಳಗಳು ಅಪವಿತ್ರಗೊಂಡಿವೆ. ಹಿಂದೆ ತೀರ್ಥಯಾತ್ರೆಯೂ ಅತ್ಯಂತ ಕಷ್ಟಕರವಾಗಿತ್ತು. ಆದ್ದರಿಂದ ನಿಜವಾದ ಭಕ್ತರುಗಳು ಮಾತ್ರವೇ ಅಲ್ಲಿಗೆ ಹೋಗುತ್ತಿದ್ದರು. ಆದರೆ ಈಗ ದುರ್ಮಾರ್ಗಿಗಳು ತಮ್ಮ ದುರ್ಮಾರ್ಗದ ಕೆಲಸಗಳಿಗಾಗಿ ಅಲ್ಲಿಗೆ ಹೋಗುವುದು ಸಾಧ್ಯವಾಗಿದೆ" 17

ಗಾಂಧಿಯ ದೃಷ್ಟಿಯಲ್ಲಿ ನಾಗರಿಕತೆಯೇ ಒಂದು ಬೇನೆ. ಗಾಂಧಿ ತಮ್ಮ ಈ ಅಭಿಪ್ರಾಯಕ್ಕೆ ಎಡ್ವರ್ಡ್ ಕಾರ್ಪೆಂಟರನ ಕೃತಿ Civilization:-Its cause and cure ಎನ್ನುವ ಕೃತಿಯಿಂದ ಪುಷ್ಟಿಯನ್ನು ಪಡೆದುಕೊಂಡರು. ತಮಗೆ ಸಾಧ್ಯವಿದ್ದಿದ್ದರೆ ಗಾಂಧಿ ನಾಗರಿಕತೆಯನ್ನು ತೊಡೆದು ಹಾಕಿ ಆದಿವಾಸೀ ಜೀವನ ಕ್ರಮವನ್ನು (Primitivism) ತರುತ್ತಿದ್ದರು. ಸದ್ಯಕ್ಕೆ ಈ ಶಕ್ತಿ ಅವರಲ್ಲಿರಲಿಲ್ಲ. ಆಧುನಿಕ ನಾಗರಿಕತೆಯಲ್ಲಿ ಅನಿಷ್ಟಗಳಿಲ್ಲ ಎನ್ನುವುದು ಇದರ ಅರ್ಥವಲ್ಲ. ಹಾಗೆ ನೋಡಿದರೆ ಆದಿವಾಸಿ ಜೀವನ ವ್ಯವಸ್ಥೆಯಲ್ಲಿ ಈಗಿರುವುದಕ್ಕಿಂತ ಹೆಚ್ಚಿನ ಅನಿಷ್ಟಗಳಿರಲಿಲ್ಲವೇ? ರೈಲ್ವೆ, ಹಡಗುಗಳು, ಮೋಟಾರು ಕಾರುಗಳು, ಟೆಲಿಫೋನ್ ಮತ್ತಿತರ ಆಧುನಿಕ ನಾಗರಿಕತೆಯ ದ್ಯೋತಕವಾದ ಸಾರಿಗೆ ಮತ್ತು ಸಂಪರ್ಕ ಸಾಧನೆಗಳನ್ನೂ ಉಪಯೋಗಿಸದಿರುವುದು ಗಾಂಧಿಗೆ ಸಾಧ್ಯವಾಗಲಿಲ್ಲ. ಅಷ್ಟೇ ಅಲ್ಲದೆ ಆಸ್ಪತ್ರೆಗಳನ್ನು ನಿವಾರಿಸುವುದೂ ಸಾಧ್ಯವಾಗಲಿಲ್ಲ. ಎಲ್ಲ ರೀತಿಯ ಖಾಯಿಲೆಗಳನ್ನು ಗುಣ ಪಡಿಸುವ ಶಕ್ತಿ ಇರುವುದು ರಾಮನಾಮಕ್ಕೇನೇ ಎಂಬುದು ಅವರ ಅಚಲ ನಂಬಿಕೆಯಾಗಿತ್ತು. "ಮನಸ್ಸು ಮತ್ತು ಬುದ್ಧಿಪೂರ್ವಕವಾಗಿ ರಾಮನಾಮವನ್ನು ಜಪಿಸುವುದು ಎಲ್ಲ ರೀತಿಯ ಖಾಯಿಲೆಗಳಿಗೂ ಮದ್ದು ಎನ್ನುವುದು ಯೋಚಿಸಿದಷ್ಟೂ ಹೆಚ್ಚು ಸ್ಥಿರವಾಗುವ ನಂಬಿಕೆ" ಎಂದು ಗಾಂಧಿ ಒಮ್ಮೆ ಹೇಳುತ್ತಾರೆ. ಆದರೆ ಕರುಳು ಭಾಗದ ರೋಗದಿಂದ (appendicitis) ಒಮ್ಮೆ ಪ್ರಾಣಾಂತಿಕವಾಗಿ ನರಳುತ್ತಿದ್ದ ಅವರನ್ನು ಗುಣಪಡಿಸಿದ್ದು ಆಧುನಿಕ ಆಸ್ಪತ್ರೆಯ ಶಸ್ತ್ರಚಿಕಿತ್ಸೆಯೇ ಹೊರತು ರಾಮನಾಮವಲ್ಲ. ಎಲ್ಲಿಯವರೆಗೆ ನಾವು ವಿಚಾರವಾದಿಗಳಾಗುವುದಿಲ್ಲವೋ ಅಲ್ಲಿಯವರೆಗೆ ನಮ್ಮ ನಂಬಿಕೆಗಳು ಮತ್ತು ಆಚಾರಗಳ ನಡುವಿನ ದ್ವಂದ್ವ ಇದ್ದೇ ಇರುತ್ತದೆ.

ಧಾರ್ಮಿಕ ವ್ಯಕ್ತಿಯಾದ ಗಾಂಧಿ ಬೌದ್ಧಿಕತೆಗಿಂತ ಹೆಚ್ಚಾಗಿ ಅಂತಃ ಪ್ರೇರಣೆಯನ್ನೇ (Intuition) ಅವಲಂಬಿಸಿದ್ದರು. ಆತ್ಮದ ಧ್ವನಿಯೇ ಭಗವಂತನ ಧ್ವನಿ ಎಂದು ನಂಬಿದ್ದರು. ಆದರೂ ಸುದೀರ್ಘವೂ, ಅವಿಶ್ರಾಂತಮಯವೂ ಆದ ಅವರ ಜೀವನದಲ್ಲಿ ಹಲವಾರು ಬಾರಿ ಮಾಡಿದ ತಪ್ಪುಗಳನ್ನು ತಡೆಯಲು ಅ

ಎರಡು ಉಪನ್ಯಾಸಗಳು

ಭಾರತದ ಆರ್ಥಿಕ ದಾರಿದ್ರ್ಯ

ಮೂಲ: ವಿ. ಆರ್. ನಾರ್ಲ

ಅನು: ಗಂಗಾಧರಮೂರ್ತಿ

ಆಧುನಿಕ ಕಾಲ

9

ಗಾಂಧಿಯ ದೃಷ್ಟಿಯಲ್ಲಿ ನಾಗರಿಕತೆಯೇ ಒಂದು ಬೇನೆ. ಗಾಂಧಿ ತಮ್ಮ ಈ ಅಭಿಪ್ರಾಯಕ್ಕೆ ಎಡ್ವರ್ಡ್ ಕಾರ್ಪೆಂಟರನ ಕೃತಿ ಸಿವಿಲೈಜೇಶನ್ ಇಟ್ಸ್ ಕಾಸ್ ಅಂಡ್ ಕ್ಯೂರ್' ಎನ್ನುವ ಕೃತಿಯಿಂದ ಪುಷ್ಟಿಯನ್ನು ಪಡೆದುಕೊಂಡರು. ತಮಗೆ ಸಾಧ್ಯವಿದ್ದಿದ್ದರೆ ಗಾಂಧಿ ನಾಗರಿಕತೆಯನ್ನು ತೊಡೆದುಹಾಕಿ ಆದಿವಾಸೀ ಜೀವನ ಕ್ರಮವನ್ನು (ಪ್ರಿಮಿಟಿವಿಸಂ) ತರುತ್ತಿದ್ದರು.

ಅಂತಃ ಪ್ರೇರಣೆಗೆ ಸಾಧ್ಯವಾಗಲಿಲ್ಲ. ಒಂದು ಸಂದರ್ಭದಲ್ಲಿ ಅವರೇ 'ಹಿಮಾಲಯ ಸದೃಶವಾದ ತಪ್ಪನ್ನು' ಮಾಡಿರುವುದಾಗಿ ಹೇಳಿಕೊಂಡರು. ಅಷ್ಟೇ ಅಲ್ಲದೆ ಅವರ ಧಾರ್ಮಿಕ ಯೋಚನಾಕ್ರಮವು ಕೆಲವು ವೇಳೆ ಅವರನ್ನು ವಿಚಾರಹೀನರನ್ನಾಗಿ ಮಾಡಿದ್ದೂ ಉಂಟು. ಸಾವಿರಾರು ಜನರನ್ನು ಬಲಿತೆಗೆದುಕೊಂಡ ಬಿಹಾರದ ಭೀಕರ ಭೂಕಂಪವನ್ನು ಕುರಿತು ಅಸ್ಪೃಶ್ಯತೆಯ ಪಾಪಕ್ಕೆ ಆ ರಾಜ್ಯದ ಜನರಿಗೆ ದೇವರು ಕೊಟ್ಟ ಶಿಕ್ಷೆ ಎನ್ನುವ ಹೇಳಿಕೆಯನು ನೀಡಿದರು. ಅಸ್ಪೃಶ್ಯತೆಯು ಬಿಹಾರದಲ್ಲಿ ಮಾತ್ರವೇ ಆಚರಣೆಯಲ್ಲಿರಲಿಲ್ಲ. ಭಾರತಾದ್ಯಂತ ಕಾಣಬಹುದಾದ ಅನಿಷ್ಟತೆ ಇದಾದರೂ ಭಗವಂತನು ಬಿಹಾರದ ಜನತೆಯನ್ನೇ ಏಕೆ ಶಿಕ್ಷಿಸಬೇಕು? ದೈವವಾದೀ ಗಾಂಧಿಯು ನೀಡಿದ ಇಂತಹ ಹಲವಾರು ವಿಚಾರಹೀನ ಹೇಳಿಕೆಗಳನ್ನು ಪಟ್ಟಿ ಮಾಡಬಹುದು. ಅವರೆ ಮಾನವತಾವಾದಿಯು ಆ ಗಾಂಧಿಯ ಬಗೆಗಿನ ಗೌರವವು ನನ್ನನ್ನು ಹಾಗೆ ಮಾಡಗೊಡುವುದಿಲ್ಲ. ಆದರೂ ಸತ್ಯ ಪಕ್ಷಪಾತಿಯಾದವನು ಗಾಂಧಿಯು ಈ ವೈಚಾರಿಕತೆಯ ವಿರೋಧವು ಭಾರತಕ್ಕೆ ದೊಡ್ಡ ಹಾನಿಯನ್ನೇ ಮಾಡಿದೆ ಎನ್ನುವುದನ್ನು ಹೇಳಲೇಬೇಕಾಗುತ್ತದೆ.

ರವೀಂದ್ರನಾಥಟಾಗೋರರು ಕೂಡ ದೇವರಲ್ಲಿ ನಂಬಿಕೆ ಇಟ್ಟಿದ್ದವರು. ಅವರ ತಂದೆಯಂತೆ ರಹಸ್ಯವಾದದಲ್ಲೂ ಅವರಿಗೆ ನಂಬಿಕೆಯಿತ್ತು. ಆದರೂ ಅವರ ವಿಚಾರಗಳಲ್ಲಿ ಪ್ರಬಲವಾದ ವೈಚಾರಿಕ ಅಂಶಗಳು ಕಾಣುತ್ತಿದ್ದವು. ಅವರು ಮನುಷ್ಯನನ್ನು. ಅವನ ವೈಚಾರಿಕತೆಯನ್ನು ಮತ್ತು ಪ್ರಗತಿಯನ್ನು ನಂಬಿದವರಾಗಿದ್ದರು.

ವಾಸ್ತವವಾಗಿ ತಮ್ಮ ಧರ್ಮವು ಮಾನವ ಧರ್ಮ ಎಂದು ಹೇಳುತ್ತಿದ್ದರು. ಬಿಹಾರ ಭೂಕಂಪದ ಬಗ್ಗೆ ಗಾಂಧಿಯ ವಿಚಾರಹೀನ ಹೇಳಿಕೆಯನ್ನು ಟಾಗೋರರು ತೀವ್ರವಾಗಿ ಖಂಡಿಸಿದರು ಎನ್ನುವುದನ್ನು ನಾನು ಈ ಸಂದರ್ಭದಲ್ಲಿಹೇಳ ಬಯಸುತ್ತೇನೆ.

ಎಂ.ಎನ್.ರಾಯ್ ಅವರೊಬ್ಬರೇ 20ನೇ ಶತಮಾನದ ಭಾರತೀಯರಲ್ಲಿ ಹೊಂದಾಣಿಕೆ ಮಾಡಿಕೊಳ್ಳದ. ಭೌತವಾದ ಮತ್ತು ವಿಚಾರವಾದದ ಸಮರ್ಥಕರಾಗಿದ್ದರು. ಅವರು ಇನ್ನೂ ಹೆಚ್ಚು ಕಾಲ ಬದುಕಿದ್ದಿದ್ದರೆ ತಮ್ಮ ಕ್ರಾಂತಿಕಾರಿ ಮಾನವತಾವಾದವನ್ನು ಒಂದು ಶಕ್ತಿಯಾಗಿ ಬೆಳೆಸುವುದು ಸಾಧ್ಯವಿತ್ತು.

ಭಾರತೀಯ ಚಿಂತನೆ ಮತ್ತು ಸಂಸ್ಕೃತಿಗಳ ಪೂರ್ಣ ಪರಿಚಯವು ಅವರಿಗಿರಲಿಲ್ಲ ನಿಜ. ಆದರೆ ಪಾಶ್ಚಾತ್ಯ ತತ್ವಜ್ಞಾನದ ಅವರಲ್ಲೂ ಭೌತವಾದಿ ದೃಷ್ಟಿಕೋನದ ಅಗಾಧ ಪಾಂಡಿತ್ಯ ಅವರಿಗಿತ್ತು. ಅವರ ಹಲವಾರು ಪುಸ್ತಕಗಳಿಂದ ಇದಕ್ಕೆ ಆಧಾರ ದೊರಕುತ್ತದೆ. ಅವುಗಳಲ್ಲಿ ಎರಡು ಭಾಗಗಳಲ್ಲಿರುವ Reason Romanticism and Revolution ಎಂಬ ಕೃತಿಯು ಎರವಲಲ್ಲದ ವಿಚಾರಗಳಿಂದ ತುಂಬಿದೆ.

ರಾಯ್ ಅವರು ಯಾವುದೇ ದಾಕ್ಷಿಣ್ಯವಿಲ್ಲದೆ ಗಾಂಧಿಯ ವಿಚಾರಗಳನ್ನು ಟೀಕಿಸುತ್ತಿದ್ದರು. ಉದಾಹರಣೆಗೆ–"ನಂಬಿಕೆಗೆ ಅಜ್ಞಾನವೇ ಮೂಲ." ನಂಬಿಕೆಯನ್ನು ಒಪ್ಪಿಕೊಳ್ಳುವ ಗಾಂಧೀಮಾರ್ಗವು ಹೇಳುವಂತೆ ಜಗತ್ತು ಮಾನಸಿಕ ಹಂತದಲ್ಲೇ ಇರುವುದಾದರೆ ಅದು ಎಂದಿಗೂ ಪ್ರಗತಿಯನ್ನು ಸಾಧಿಸಲಾರದು.

ಪ್ರಾಮಾಣಿಕ ಧರ್ಮಶ್ರದ್ಧೆ ಇರುವ ಯಾರೇ ಆಗಲಿ ಜಗತ್ತಿನ ಸಧ್ಯದ ಸ್ಥಿತಿಯನ್ನು ಬದಲಾಯಿಸುವ ಯಾವ ಪ್ರಯತ್ನವನ್ನು ಮಾಡುವುದೂ ಸಾಧ್ಯವಾಗುವುದಿಲ್ಲ. ಏಕೆಂದರೆ ಹಾಗೆ ಮಾಡುವುದು ದೈವೇಚ್ಛೆಯನ್ನು. ವಿಧಿನಿಯಾಮಕತೆಯನ್ನು ಮೀರುವುದೇ ಆಗಿದೆ. ಅವರ, ಉತ್ತಮ–ಅಧಮ, ಒಳಿತು-ತಪ್ಪು, ಪ್ರೀತಿ–ದ್ವೇಷಗಳಂತಹ ಪರಸ್ಪರ ವಿರುದ್ಧ ಯೋಚನೆಗಳನ್ನು ಹೊಂದಿರುವುದು ಸಾಧ್ಯವಿಲ್ಲ.

ಭಗವಂತನು ಕರುಣಾಮಯಿಯಾದ್ದರಿಂದ ಕಲ್ಯಾಣಕಾರಕ ಗುಣಗಳನ್ನು ನ್ಯಾಯ ನೀತಿಗಳನ್ನು ಮೈವೆತ್ತಿರುವುದರಿಂದ ಜಗತ್ತಿನ ಎಲ್ಲ ಆಗು ಹೋಗುಗಳು ಒಳ್ಳೆಯವು ಮತ್ತು ದೋಷರಹಿತವಾದವು. ಇಹದ ಬದುಕಿನಲ್ಲಿ ಸವಲತ್ತುಗಳನ್ನು, ಅಧಿಕಾರವನ್ನು ಅನುಭವಿಸುವ ಜನರಿಗೆ ಸತ್ಯದ ಈ ದಿವ್ಯ ತಾತ್ವಿಕ ನೆಲೆಗಿಂತ ಬೇರೆ ಯಾವುದು ಸಮಂಜಸವಾಗುತ್ತದೆ? ವ್ಯವಸ್ಥೆಯು ದೈವಸಂಕಲ್ಪವೆಂದೂ, ಅವನ ಇಚ್ಛೆಯೆಂದೂ ಸಾಮಾನ್ಯ ಜನತೆ ನಂಬುವುದರಿಂದ ಈ ಧಾರ್ಮಿಕ ದೃಷ್ಟಿಯು ಉನ್ನತ ವರ್ಗಗಳ ಆಸಕ್ತಿಗಳನ್ನು ರಕ್ಷಿಸುವುದರಲ್ಲಿ ಯಾವ ಸಂದೇಹವೂ ಇಲ್ಲ. ಧರ್ಮಶ್ರದ್ಧೆ ಎಂದು ಕರೆಯುವ ಅಧ್ಯಾತ್ಮಿಕ ಮೌಲ್ಯದ ಸಾಮಾಜಿಕ ಪ್ರಾಮುಖ್ಯತೆಯು ಇದೇ.

ಧರ್ಮಕ್ಕೆ ಬದಲಾಗಿ ವೈಚಾರಿಕತೆಗೂ, ಆತ್ಮಕ್ಕೆ ಬದಲಾಗಿ ಮನಸ್ಸಿಗೂ ಆದ್ಯತೆಯನ್ನು ಕೊಡಬೇಕೆನ್ನುವುದು ನನ್ನ ಪ್ರಾರ್ಥನೆ.

ಧರ್ಮ ಶ್ರದ್ಧೆ ಗಾಂಧೀವಾದದ ಕೈಗಂಬ. ಈ ಕೈಗಂಬದ ಮೇಲೆಯೇ ಸನಾತನ ಹಿಂದೂ ಧರ್ಮವು ಆಶ್ರಯ ಪಡೆದಿರುವುದು. ಮಾನವ ಗ್ರಾಹ್ಯ ಜಗತ್ತಿನ ಆಚೆಗಿರುವ ಅಧ್ಯಾತ್ಮಿಕ, ಅಪೌರುಷೇಯ ಶಕ್ತಿಯ ನೆಲೆಯಿಂದಲೇ. ಈ ವಿಚಾರವು ಹುಟ್ಟಿರುವುದರಿಂದ ಅರಿವಿಗೆ ನಿಲುಕದಂತಿರುವುದನ್ನು ಅರಿಯುವ ಯತ್ನವು ಈ ತತ್ವದಲ್ಲಿದೆ. ಸಹಜವಾಗಿ ಅದು ಜ್ಞಾನವೆಂದರೆ ದೈವ ವಾಕ್ಯವೇ ಎನ್ನುವಂತಹದ್ದು. ಭ್ರಮೆಯೇ ಜ್ಞಾನ ವಿಜೃಂಭಣೆಯ ಮೂಲ. 19.

ನನ್ನ ಈ ಉಪನ್ಯಾಸವನ್ನು ಮುಗಿಸುವ ಮೊದಲು ಧರ್ಮಕ್ಕೆ ಬದಲಾಗಿ ವೈಚಾರಿಕತೆಗೂ, ಆತ್ಮಕ್ಕೆ ಬದಲಾಗಿ ಮನಸ್ಸಿಗೂ ಆದ್ಯತೆಯನ್ನು ಕೊಡಬೇಕೆನ್ನುವುದು ನನ್ನ ಪ್ರಾರ್ಥನೆ. ಸುಮಾರು ಹತ್ತು ಸಾವಿರ ವರ್ಷಗಳವರೆಗೆ ನಾವು ಧರ್ಮದೊಂದಿಗೆ ಬದುಕು ಸಾಗಿಸಿದ್ದೇವೆ. ಒಂದಲ್ಲ ನೂರಾರು ಧರ್ಮಗಳನ್ನು ಪರೀಕ್ಷಿಸಿದ್ದೇವೆ.

ಮರಗಳನ್ನು, ಸರ್ಪಗಳನ್ನು ಪೂಜಿಸುವುದರಿಂದ ಹಿಡಿದು ಸೂರ್ಯ ಚಂದ್ರರನ್ನು ಆರಾಧಿಸುವವರೆಗೆ ಈ ಧರ್ಮಗಳು ಹರಡಿಕೊಂಡಿವೆ. ಹಲವಾರು ಕೈಗಳ ಹಲವಾರು ತಲೆಗಳ ಎಲ್ಲ ಬಗೆಯ ಮಾನವ ನಿರ್ಮಿತ ದೇವತೆಗಳನ್ನು ನಾವು ಕಂಡಿದ್ದೇವೆ. ಸಿಂಹದ ಶಿರವೂ ಮಾನವನ ಶರೀರವೂ ಒಂದಾದ ದೇವರನ್ನು ಕಲ್ಪಿಸಿದ್ದೇವೆ. ಆನೆಯ ತಲೆಯೂ ಮಾನವ ಶರೀರವೂ ಇರುವ ಮತ್ತೊಬ್ಬನನ್ನು ಸೃಷ್ಟಿಸಿದ್ದೇವೆ. ಚಾಚಿದ ನಾಲಿಗೆಯಿಂದ ರಕ್ತವನ್ನು ತೊಟ್ಟಿಕ್ಕಿಸುವ ಆರು ಕೈಗಳ ದೇವತೆಯನ್ನು ಸೃಷ್ಟಿಸಿದ್ದೇವೆ. ನಾವು ಸಂಪರ್ಕ ಪಡೆದ ಮೂಲ ನಿವಾಸಿಗಳಿಂದ ಹಲವಾರು ದೇವ ದೇವತೆಗಳನ್ನು ಸ್ವೀಕರಿಸಿ ಅವಕ್ಕೆ ವಿವಿಧವೂ ವಿಚಿತ್ರವೂ ಆದ ಆಕಾರಗಳನ್ನು ಕೊಟ್ಟಿದ್ದೇವೆ.

ದೇವರುಗಳಿಗೆ ಮುಂಬಡ್ತಿಯನ್ನು ಕೊಟ್ಟಿದ್ದೇವೆ, ಹಿಂಬಡ್ತಿಯನ್ನು ವಿಧಿಸಿದ್ದೇವೆ. ಅಷ್ಟೇನೂ ಪ್ರಮುಖವಲ್ಲದ ದೇವತೆಯಾದ ಋಗ್ವೇದದ ವಿಷ್ಣುವು ಕ್ರಮೇಣ ಉನ್ನತ ಸ್ಥಾನವನ್ನು ಗಳಿಸಿದರೆ ವೇದ ಕಾಲದ ಪ್ರಮುಖ ದೇವತೆಯಾದ, ರಾಣಿವಾಸವನ್ನು ಹೊಂದಿದ್ದ, ಇಂದ್ರನನ್ನು ಒಬ್ಬ ಸ್ಥಾನಿಕನ ಪರಿಸ್ಥಿತಿಗೆ ಇಳಿಸಲಾಗಿದೆ. ದಕ್ಷಿಣದ ಶಿವನು ಉತ್ತರದ ರುದ್ರನಲ್ಲಿ ಲೀನವಾಗಿ ಕೈಲಾಸವೆಂಬ ತನ್ನದೇ ರಾಜ್ಯದಲ್ಲಿರುವ ಮಹದೇವನನ್ನಾಗಿ ರೂಪಾಂತರಿಸಿದ್ದೇವೆ.

ಈ ಮಾನವ ನಿರ್ಮಿತ ದೇವರುಗಳ ಪ್ರಯೋಗಗಳಿಂದ ನಿರಾಕಾರನೂ, ಅನಿರ್ವಚನೀಯನೂ, ಅನಾಮಿಕನೂ, ಅರಿವಿನಾಚೆಗೆ ಇರುವ ಸರ್ವೋಚ್ಚದೈವದ ಉನ್ನತ ಧರ್ಮ ಎನ್ನುವಂತಹದನ್ನು ಮೂಲೆಗೆ ತಳ್ಳಿದ್ದೇವೆ. ಸೃಷ್ಟಿಯ ಪ್ರಕ್ರಿಯೆ, ಸತ್ಯ ಮತ್ತು ಭ್ರಮೆ. ಕರ್ಮ ಮತ್ತು ಪುನರ್ಜನ್ಮ, ಸ್ವರ್ಗ ಮತ್ತು ನರಕ ಇಂತಹ ರುಜುವಾತು ಪಡಿಸಲಾಗದ ಅಥವಾ ಸುಳ್ಳು ಎಂದು ಸಾಬೀತು ಪಡಿಸಲಾಗದ ನೂರಾ ಒಂದು ಕಲ್ಪನೆಗಳನ್ನು ಮಾಡಿದ್ದೇವೆ.

ಧರ್ಮ ಮತ್ತು ದೇವರುಗಳನ್ನೇ ಕುರಿತು ಸಾವಿರಾರು ವರ್ಷಗಳಿಂದ ಒದ್ದಾಡುತ್ತಿರುವ ನಮ್ಮನ್ನು ಇದು ಯಾವ ಸ್ಥಿತಿಗೆ ತಂದು ನಿಲ್ಲಿಸಿದೆ?

ನಮ್ಮ ಧಾರ್ಮಿಕ ಚಿಂತನೆಗಳಿಂದ ಮತ್ತು ಚಟುವಟಿಕೆಗಳಿಂದ ಯಾರಿಗಾದರೂ ವೈಯಕ್ತಿಕವಾದ ಮೋಕ್ಷ ದೊರಕಿದೆಯೋ ಏನೋ ನನಗೆ ಗೊತ್ತಿಲ್ಲ. ಆದರೆ ಒಂದಂಶವಂತೂ ಸ್ಪಷ್ಟ. ವಿದೇಶಿಯರ ಆಕ್ರಮಣದಿಂದಾಗಲೀ, ಲೂಟಿ ಸೂರೆಗಳಿಂದಾಗಲೀ, ಪರಕೀಯರ ಆಳ್ವಿಕೆ ಮತ್ತು ನಾವು ಅನುಭವಿಸಿದ ಅವಮಾನಗಳಿಂದಾಗಲೀ, ದಾರಿದ್ರ್ಯ ಮತ್ತು ಅವಹೇಳನದಿಂದಾಗಲೀ, ರೋಗ ರುಜಿನ ಮತ್ತು ಸಂಕಷ್ಟಗಳಿಂದಾಗಲೀ ನಮ್ಮನ್ನು ಧರ್ಮವಾಗಲೀ ದೇವರಾಗಲೀ ರಕ್ಷಿಸಲಿಲ್ಲ ಎನ್ನುವುದು ಮಾತ್ರ ಸತ್ಯ.

ಶ್ರೀಮಂತ ಪ್ರಕೃತಿಯ ಕರುಣೆ ನಮಗಿದೆ. ಅಗಾಧವಾದ ಪರ್ವತ ಶ್ರೇಣಿಗಳೂ, ಮನೋಹರವಾದ ಕಣಿವೆಗಳೂ, ಅದ್ಭುತವಾದ ನದಿಗಳೂ, ಸಮೃದ್ಧವೂ ಫಲವತ್ತಾದುದೂ ಆದ ಭೂಮಿಯೂ ಇವೆ. ಅಗಾಧ ಖನಿಜ ಸಂಪತ್ತಿದೆ. ಇಷ್ಟಿದ್ದರೂ ನಮ್ಮದು ವಿಶ್ವದಲ್ಲೇ ಬಡರಾಷ್ಟ್ರ.

(ಮುಂದುವರೆಯುವುದು)



ಭಾಲಾಕಾರರ ಬೊಗಳುಬಿತನ

ಇಂಡಿಯಾದ ದಲಿತ ಇತಿಹಾಸದಲ್ಲಿ ಎಂದೆಂದೂ ಮರೆಯಲಾಗದ ದಶಕ, ಸಾವಿರಾರು ವರ್ಷಗಳ ಸಿಟ್ಟು, ಅವಮಾನ, ಯಾತನೆಯನ್ನು ತನ್ನ ಹೊಟ್ಟೆಯಲ್ಲಿಟ್ಟುಕೊಳ್ಳಲಾಗದ ದಲಿತ ಸಮುದಾಯ ಅದನ್ನು ಹೊರ ಉಗುಳತೊಡಗಿದ ದಶಕ, ಈ ಜ್ವಾಲಾಮುಖಿಯ ರೂವಾರಿ ಡಾ॥ಅಂಬೇಡ್ಕರ್.

ಈ ಸಾಮಾಜಿಕ ಜಾಗೃತಿಗೆ ಪೂರಕವಾಗಿ 'ಮೂಕನಾಯಕ' 'ಬಹಿಷ್ಕೃತ ಭಾರತ' ಪತ್ರಿಕೆಗಳನ್ನು ಹುಟ್ಟು ಹಾಕಿದರು. ಮೊಟ್ಟ ಮೊದಲ ಬಾರಿಗೆ 20 ಮಾರ್ಚ್, 1927ರಂದು ಚೌದರ್ ಕೆರೆಯ ನೀರನ್ನು ಮುಟ್ಟಿ ಅದಕ್ಕೆ ಪಾವಿತ್ರ್ಯ ತಂದು ಕೊಟ್ಟರು. 25, ಡಿಸೆಂಬರ್, 1927 ರಂದು ಸಾಮಾಜಿಕ ಪಾಪಗಳನ್ನು ದೈವತ್ವಕ್ಕೇರಿಸಿದ್ದ 'ಮನುಸ್ಮೃತಿ'ಯನ್ನು ಸುಟ್ಟರು.

ಆಗ ಪ್ರತಿಗಾಮಿ ಹಿಂದೂ ಸಂಘಟನೆಗಳ ವಕ್ತಾರರು, ತಿಲಕ್‌ವಾದಿ ಮತಾಂಧ ಪತ್ರಕರ್ತರು ಅಂಬೇಡ್ಕರ್‌ರ ವಿರುದ್ಧ ಅಪಪ್ರಚಾರ ಪ್ರಾರಂಭಿಸಿದವು ಬಾಲಾಕಾರ ಎಂಬ ಮತಿಗೇಡಿ ಪತ್ರಕರ್ತನ ಬಡ ಬಡಿಕೆಗೆ ಅಂಬೇಡ್ಕರ್ ಕೊಟ್ಟ ಪ್ರತ್ಯುತ್ತರ ಈ ಸಂಪಾದಕೀಯ.

ಕೃಪೆ: ಡಾ॥ ಅಂಬೇಡ್ಕರ್ ಅವರ ಬಹಿಷ್ಕೃತ ಭಾರತದಲ್ಲಿನ ಸ್ಫುಟ ಲೇಖನಗಳು.

ಅನು: ಡಾ॥ ದತ್ತಾತ್ರಯ ಪೂಜಾರಿ ಡಾ॥ ಗೀತಾಪೂಜಾರಿ.

[ಈ ಅಂಕಣದಲ್ಲಿ ಇಂತಹ ಅಪರೂಪದ ಬರಹಗಳನ್ನು ಪ್ರಕಟಿಸಲಾಗುವುದು–ಸಂ.]

ಈಗ ಇಲ್ಲಿ ಕೆಲವು ವಿಕ್ಷಿಪ್ತ ಹಾಗೂ ಪ್ರತಿಗಾಮಿ ವಿಚಾರ ಸರಣಿಯ ಪತ್ರಕಾರರಿದ್ದಾರೆ. ಅವರಲ್ಲಿ ಹಿಂದೂ ಸಮಾಜದ 'ರೊಟಿ ಬಂದ–ಬೇಟಿ ಬಂದ' ಸ್ವರೂಪವನ್ನು ಹಾಗೆಯೇ ಉಳಿಸಿ ಹಿಂದೂ ಸಂಘಟನೆ ಹಾಗೂ ಶುದ್ಧಿ–ಚಳವಳಿಯನ್ನು ನಡೆಸಬೇಕೆಂದು ಪ್ರತಿಪಾದಿಸುವವರಲ್ಲಿ ಭಾಲಾಕಾರರ ಹೆಸರನ್ನು ಸೇರಿಸಲು ಅಡ್ಡಿಯೇನಿಲ್ಲ. ಬ್ರಾಹ್ಮಣ ಭೋಜನ, ಗಣೇಶೋತ್ಸವಗಳಲ್ಲಿ ಕೋಲು ಬಾರಿಸುವ ಹುಡುಗರ ಮೇಳಗಳು ಮತ್ತು ಮಡಿವಂತಿಕೆಯಿಂದಾಗಿ ಇತರರಿಂದ ಅಲಿಪ್ತರಾಗಿದ್ದು ತಮ್ಮ ಶ್ರೇಷ್ಠತ್ವ ಮೆರೆಯುವ ಬ್ರಾಹ್ಮಣರ ನಿಷ್ಠುರತೆ ಇವೆಲ್ಲವುಗಳ ಬಲದಿಂದ ನೋಡ ನೋಡುತ್ತಿರುವಂತೆಯೇ ಸ್ವರಾಜ್ಯಗಳಿಸಬಹುದು ಮತ್ತು ಹಿಂದೂ ಧರ್ಮದ ಮೇಲಿನ ಆಕ್ರಮಣಗಳನ್ನು ತಡೆಗಟ್ಟಿ ಹಿಮ್ಮೆಟ್ಟಿಸಬಹುದು. ಎಂದೆಲ್ಲ ಎದೆತಟ್ಟಿ ಹೇಳುವ ನಾನಾ 'ಲೋಕಮಾನ್ಯ ಪಂಥಿ'ಯ' ಭೋಪಟಕರರ '2' ಲೇಖನ ಮಹಾಪರಿಷತ್ತಿನ ಸಮಾಪ್ತಿಯ ನಂತರ ಉಚ್ಚ ವರ್ಣೀಯರೆನಿಸಿಕೊಳ್ಳುವ ಜನರು ಮೆರೆದ ಗುಂಡಾಗಿರಿಯ ಪ್ರತಾಪವನ್ನು ಸಮರ್ಥಿಸಲು ಹಾತೊರೆಯುತ್ತಿದೆ. ಅಸ್ಪೃಶ್ಯರೆನಿಸಿಕೊಂಡ ಜಾತಿಗಳ ಬಗ್ಗೆ ಹುಸಿ ಸಹಾನುಭೂತಿ ವ್ಯಕ್ತಪಡಿಸಿ ಅವರು ಅಸ್ಪೃಶ್ಯ ಸಮಾಜದ ಮುಂದಾಳುಗಳಿಗೆ ಮತ್ತು ಅಸ್ಪೃಶ್ಯರೆನಿಸಿಕೊಂಡ ಜಾತಿಗಳ ಪುರಸ್ಕಾರಕರಾದ ಅನ್ಯ ಜಾತೀಯರಿಗೆ, ಅವರು ಬಯಸದ ಉಪದೇಶ ಮಾಡುವ ಸಂಧಿ ಸಾಧಿಸಿಕೊಂಡಿದ್ದಾರೆ. ಭಾಲಾಕಾರರಂತಹ ಜನರಿಗೆ ನಾವು ಸ್ಪಷ್ಟವಾಗಿ ಹೇಳುವುದೇನೆಂದರೆ, ನಮಗೆ ನಮ್ಮ ಉನ್ನತಿಗಾಗಿ ಮಾಡಬೇಕಾಗಿರುವ ಪ್ರಯತ್ನ

ಇತಿಹಾಸದ ಹೆಜ್ಜೆಗಳು...

ಗಳಲ್ಲಿ ಇತರರ ಸಹಾಯ ಮತ್ತು ಸಹಾನುಭೂತಿಗಳು ಅವಶ್ಯವಾಗಿ ಬೇಕಾಗಿವೆ. ಆದರೆ ಹಿಂದೂ ಸಮಾಜದ 'ಕಬ್ಬಿಣದ ಚೌಕಟ್ಟು' ಇದ್ದಕ್ಕಿದ್ದಂತೆ ಇಟ್ಟು ಮೆಹರಬಾನಿಗಾಗಿ ನಮಗೆ ಸವಲತ್ತುಗಳನ್ನು ಕೊಡಬಯಸುವ ಮತ್ತು ನಮ್ಮ ನೈಸರ್ಗಿಕ ಹಕ್ಕುಗಳಿಗೆ ಮಹತ್ವ ಕೊಡದೆ ಕೇವಲ ತಮ್ಮ ಧರ್ಮ ಗುರುತ್ವದ ವರ್ಚಸ್ಸು ಎದ್ದು ಕಾಣಬೇಕೆಂದು ನಮ್ಮನ್ನು ಹಿಂದೂ ಸಮಾಜದಲ್ಲಿ ಉಳಿಸಿಕೊಳ್ಳಬಯಸುವ ಸ್ವಾರ್ಥಿ ಮತ್ತು ವರ್ಚಸ್ಸ ಲೋಲುಪ ಜನರ ಸಹಾನುಭೂತಿಯ ಅವಶ್ಯಕತೆ ನಮಗೆ ಎಳ್ಳಷ್ಟೂ ಇಲ್ಲ.

ಅಸ್ಪೃಶ್ಯರೆನಿಸಿಕೊಂಡ ಸಮಾಜಕ್ಕೆ ನಿಜವಾದ ಶತ್ರುಗಳು ಯಾರಾದರೂ ಇದ್ದರೆ, ಅವರು ಇಂತಹ ಜನರೇ. ಅಜ್ಞಾನಿ ಹಿಂದೂ ಸಮಾಜವನ್ನು ಇಂತಹರೇ ಹೆಚ್ಚು ಮೂರ್ಖಗೊಳಿಸುತ್ತಿದ್ದಾರೆ. ಅಜ್ಞ ಸಮಾಜದ ತಿಳುವಳಿಕೆಯ ಅರಿವು ನಮಗೆ ಇದೆ. ಅವರಿಂದ ಅವಿಚಾರದ ಅಥವಾ ಅತ್ಯಾಚಾರದ ಕೃತ್ಯಗಳು ನಡೆದರೆ ಅದು ಅವರ ಅಜ್ಞಾನದ ಪರಿಣಾಮವೆಂದು ನಾವು ತಿಳಿಯುತ್ತೇವೆ ಮತ್ತು ಇಂದಲ್ಲ ನಾಳೆ ಅವರ ವಿಚಾರಗಳು ಪರಿವರ್ತನೆಗೊಂಡು ಅವರಲ್ಲಿ ಸಮತೆಯ ವಿಚಾರ ಉತ್ಪನ್ನವಾಗಿ ಸಂಪೂರ್ಣ ಸಮಾಜದಲ್ಲಿ ಏಕತೆ ನೆಲೆಗೊಳ್ಳುತ್ತದೆ ಎಂಬುದರಲ್ಲಿ ನಮಗೆ ನಂಬಿಕೆಯಿದೆ. ಆದರೆ ಸುಶಿಕ್ಷಿತ 'ಜ್ಞಾನ ಪುಚ್ಛ'ಗಳನ್ನು ಸರಳಗೊಳಿಸುವುದು ಮಾತ್ರ ಬ್ರಹ್ಮದೇವನಿಂದಲೂ ಸಾಧ್ಯವಿಲ್ಲ!

ಅಸ್ಪೃಶ್ಯರ ಆತುರ ಕ್ರಿಯಾಗಳು 'ತರಾತುರಿ' ನಡೆಸಿದ್ದಾರೆಂಬುದು 'ಛಾಲಾ' ಕಾರರ ಆರೋಪ. ಘಾಜೀಲ ಆತುರ ಸಮಾಜ ಸುಧಾರಕರು ಎಂದು ಛಾಲಾಕಾರರು ಹೆಸರಿಸಿರುವ ಜನರ ಅಪರಾಧ ವೇನೆಂದರೆ, ಅವರು 'ಅಸ್ಪೃಶ್ಯರಿಗೆ ನೀರಿನ ತಾಣಗಳನ್ನು ಮುಕ್ತವಾಗಿಡಬೇಕು. ಅವರ ಅಸ್ಪೃಶ್ಯತೆಯನ್ನು ತೆಗೆದು ಹಾಕಬೇಕು ಮತ್ತು ಅವರಿಗೆ, ಹಿಂದುಗಳ ಮಂದಿರಗಳಲ್ಲಿ ಪ್ರವೇಶಿಸಲು ಅಡ್ಡಿ ಮಾಡಬಾರದು' ಎಂದು ಪ್ರತಿಪಾದಿಸುತ್ತಾರೆ. ಈ 'ಅಹಿಸ್ಕೆ ಕದಮ' ಸುಧಾರಕರು ಹೇಳುವದೇನೆಂದರೆ, ಇತರ ಜನರ ಮನೋಭಾವನೆಗಳಿಗೆ ಸ್ವಲ್ಪವೂ ಧಕ್ಕೆ ಹಚ್ಚದೆ ಅಸ್ಪೃಶ್ಯರು ತಮ್ಮ ಉನ್ನತಿ ಮಾಡಿಕೊಳ್ಳಬೇಕು. ಎಷ್ಟೇ ವರ್ಷ ಕಳೆದರೂ ಕೂಡ 'ಇನ್ನೂ ಅಸ್ಪೃಶ್ಯತೆ ನಿವಾರಣೆಯ ಕಾಲ ಬಂದಿಲ್ಲ' ಎಂಬ ತುಂಟು ನೆಪ ಒಡ್ಡುವದು ಮತ್ತು ಇನ್ನೊಂದೆಡೆ ಅಸ್ಪೃಶ್ಯರ ವಿಷಯದಲ್ಲಿ ಟೊಳ್ಳು ಸಹಾನುಭೂತಿ ತೋರಿಸುವದು! ಈ ಕಣ್ಣು-ಮುಚ್ಚಾಲೆ ಇನ್ನು ಮುಂದೆ ನಡೆಯುವದು ಸಾಧ್ಯವಿಲ್ಲ. ಅಸ್ಪೃಶ್ಯತೆ ಈಗಿನದಲ್ಲವಂತೆ. 'ಅದು ಒಂದು ವರ್ಷದಲ್ಲಿ ನಷ್ಟವಾಗಲಾರದು. ಹಾಗಿದ್ದಾಗ ಕಾಲದ ಸೀಮೆ ಎಂದಿದ್ದರೂ ಒಂದೇ ರೀತಿ ಇರುವದು!' ಈ ಪ್ರಕಾರದ ಟೀಕೆ ಟಿಪ್ಪಣಿ ಮಾಡುವವರನ್ನು ನಾವು ಕೇಳುವದೇನೆಂದರೆ ರಾಜಕೀಯ ಕ್ಷೇತ್ರದಲ್ಲಿ 'ಸ್ವರಾಜ್ಯ'ದ ತರಾತುರಿ ಮಾಡುವಾಗ ಈ ನಿಮ್ಮ ಬುದ್ಧಿ ಎಲ್ಲಿ ಹೋಗಿರುತ್ತದೆ? ಸಾವಿರಾರು ವರ್ಷಗಳ ನಿಮ್ಮ ಗುಲಾಮಗಿರಿಯ ರೂಢಿಗಳು ಒಮ್ಮೆಲೇ ಹೇಗೆ ಇಲ್ಲವಾದವು? ಸಾವಿರಾರು ವರ್ಷಗಳಿಂದ ನೀವು ಯಾವ ಪಾರತಂತ್ರ್ಯವನ್ನು ಅನುಭವಿಸುತ್ತಿದ್ದೀರೋ ಅದು ನೋಡ-ನೋಡುತ್ತಿರುವಂತೆಯೇ ಹೇಗೆ ಇಲ್ಲವಾದೀತು? ಅದು ಇಲ್ಲವಾಗಲು ಜಾಗೃತಿ ಆದಂದಿನಿಂದ ಅಷ್ಟೇ. ಅಂದರೆ ಸಾವಿರಾರು ವರ್ಷಗಳ ಕಾಲಾವಧಿ ಕಳೆಯಬೇಡವೇ? ಯಾಕೆಂದರೆ ನೀವೇ ಹೇಳಿದ ಹಾಗೆ 'ಕಾಲದ ಸೀಮೆ ಎಂದಿದ್ದರೂ ಒಂದೇ ರೀತಿ ಇರುವದು!' ನೀವು ಸ್ವರಾಜ್ಯಕ್ಕೆ ಯೋಗ್ಯರಲ್ಲವೆಂಬ ಮಾತು ನಿಮ್ಮ ಮನೋರಚನೆಯಿಂದ ಸ್ಪಷ್ಟವಾಗಿ ಕಂಡು ಬರುತ್ತದೆ.

ಯಾವ ಕಾರಣಗಳಿಂದಾಗಿ ನೀವು ಸ್ವರಾಜ್ಯವನ್ನು ಕಳೆದುಕೊಂಡಿರೋ ಅವು ಇನ್ನೂ ಹಾಗೆಯೇ ಇವೆ. ಬಹಳವೇಕೆ, ಮೊನ್ನೆ ಮಹಾಡದಲ್ಲಿ ನಡೆದ ದಂಗೆಯಿಂದಲೇ ನೀವು ಸ್ವರಾಜ್ಯಕ್ಕೆ ನಾಲಾಯಕರಾಗಿದ್ದೀರೆಂಬುದು ಸಾಬೀತಾಗಿದೆ. ನೀವು ಅಲ್ಪ ಸಂಖ್ಯಾಕರ ನಾಗರಿಕತ್ವದ ಹಕ್ಕುಗಳನ್ನು ಕಬೂಲು ಮಾಡಲು ಸಿದ್ಧರಿಲ್ಲ. ಬಡ-ದುರ್ಬಲ ಜನರೊಂದಿಗೆ ನ್ಯಾಯವಾಗಿ ನಡೆದುಕೊಳ್ಳಲು ನಿಮಗೆ ಮನಸ್ಸಿಲ್ಲ ಮತ್ತು ಹಿಂದೂ ರಾಷ್ಟ್ರ ಅಸ್ತಿತ್ವಕ್ಕೆ ಬಂದಿದ್ದರೆ ಬಹಿಷ್ಕೃತ ವರ್ಗದ ದಿನಗಳೇ ತುಂಬುತ್ತಿದ್ದವು. ಕಲೆಕ್ಟರರು ಯೂರೋಪಿಯನ್, ಡಿ.ಪೋ. ಸೂಪರಿಂಟೆಂಡೆಂಟರು ಯೂರೋಪಿಯನ್ ಮತ್ತು ಪೊಲೀಸ್ ಇನ್ಸ್ಪೆಕ್ಟರರ ಮುಸಲ್ಮಾನ-ಹೀಗೆ ಅಧಿಕಾರಿಗಳು ಇರದಿದ್ದರೆ ಮತ್ತು ಪವಾಡದ ಮುಸಲ್ಮಾನರು ತಮ್ಮ-ತಮ್ಮ ಮನೆಗಳಲ್ಲಿ ಬಹಿಷ್ಕೃತ ವರ್ಗದ ಸ್ತ್ರೀ-ಪುರುಷರು ಹಾಗೂ ಮಕ್ಕಳಿಗೆ ಆಶ್ರಯ ನೀಡಿರದಿದ್ದರೆ ಸ್ಪೃಶ್ಯ ವರ್ಣೀಯರೆನಿಸಿಕೊಳ್ಳುವ ಹಿಂದುಗಳು ಅತ್ಯಾಚಾರದ ಪರಾಕಾಷ್ಠೆಯನ್ನೇ ತಲುಪುತ್ತಿದ್ದರು. ಹೀಗಿದ್ದರೂ 'ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು' '3' ಎಂದು ಹೇಳಲು ನಿಮಗೆ ನಾಚಿಕೆಯೆನಿಸುವದಿಲ್ಲ. ಸ್ವರಾಜ್ಯ ಕೇವಲ ನಿಮ್ಮ ಜನ್ಮಸಿದ್ಧ ಹಕ್ಕು ಮತ್ತು ಹೊಲೆಯ ಸಮಗಾರರಿಗೆ ಯಾವುದೇ ಹಕ್ಕೇ ಇಲ್ಲವೇನೋ! ನೀವು ಮುಖದ ಮೇಲೆ ಎಸೆದ ತುಂಡನ್ನೇ ನಮಲುತ್ತಾ ಹೊಲೆಯ-ಸಮಗಾರರು ಸಮಾಧಾನ ಪಟ್ಟುಕೊಳ್ಳಬೇಕು. ಹಾಗಾದರೆ ನೀವು ಕೂಡ ಸರಕಾರವು ಮೆಹರಬಾನಿಯಿಂದ ಕೊಡ ಮಾಡಿದಷ್ಟು ಹಕ್ಕಿನ ಮೇಲೆ ಸಂತುಷ್ಟರಾಗಿ ಸುಮ್ಮನೆ ಏಕೆ ಕುಳಿತುಕೊಳ್ಳುವದಿಲ್ಲ? ನಿಧಾನತೆಯ ಉಪದೇಶ ನಿಮ್ಮ ತರಾತುರಿಯ ರಾಜಕೀಯ ಚಳವಳಿಗೆ ತಟ್ಟುವದಿಲ್ಲವೇನು? ತರಾತುರಿ ಬೇಡವಾದರೆ ಅದು ಎಲ್ಲಿಯೂ ಬೇಡ. ರಾಜಕೀಯಕ್ಕೆ ಅದು ಇಷ್ಟವಾದರೆ, ಸಾಮಾಜಿಕ ಕ್ಷೇತ್ರದಲ್ಲಿ ಜೂಜಿನ ಕುದುರೆಯು ಹಾಗೆ ಓಡುವದು ಮತ್ತು ಸಾಮಾಜಿಕ—ಧಾರ್ಮಿಕ ಸಮಾನತೆಯ ಪ್ರಶ್ನೆ ಎದ್ದಾಗ ಬಸವನ ಹುಳಕ್ಕಿಂತ ಸಾವಕಾಶವಾಗಿ ನಡೆಯುವದರಿಂದಲೇ ನಿಜವಾದ ಪ್ರಗತಿ ಸಾಧ್ಯವೆಂದು ಅಧಿಕಪ್ರಸಂಗತನ [illegible]ದು ಶುದ್ಧ ರೋಗ. ಇಂಥ ರೋಗಿಗೆ ಅಸ್ಪೃ[illegible]ಎಂದೂ ದಿಕ್ಕೊಡುವದಿಲ್ಲ.

'ಭಾಲಾ'ಕಾರರು ಅಸ್ಪೃ[illegible] ಸಹಾನುಭೂತಿ ಇದೆಯೆಂದು ತೋರಿಸಿಕೊಳ್ಳುತ್ತಾರೆ. ಆದರೆ ಆ ಸಹಾನುಭೂತಿಗೆ ಕವಡೆಯಷ್ಟು ಬೆಲೆ ಇಲ್ಲ. ತೋರಿಕೆಗೆ ಅವರು ಸಹಾನುಭೂತಿ ವ್ಯಕ್ತಪಡಿಸುವ ಪ್ರಯತ್ನ ಮಾಡಿದ್ದಾರೆ. ಆದರೆ ಅದೇ ಲೇಖನದಲ್ಲಿ ಅವರ ಹೊಟ್ಟೆಯಲ್ಲಡಗಿದ ಕಾಲ ಕೂಟ ಹೊರಬಿದ್ದಿದೆ. ಜನರ ಮನೋವೃತ್ತಿಯನ್ನು ನೋಯಿಸ

ಕೆಟ್ಟ ಸರ್ಕಾರದ ಕೊಂಡಿಗೆ ಒದೀಬೇಕು..

ಚಿತ್ರದುರ್ಗ

ದಿನಾಂಕ 7-12-87ರಂದು ಚಳ್ಳಕೆರೆಯಿಂದ ಹೊರಟ ಜಾಥಾ, ಲಂಬಾಣಿ ತಾಂಡಕ್ಕೆ ಬಂದು ಅಲ್ಲಿ ಹಾಡಿನ ಕಾರ್ಯಕ್ರಮ ಕೊಟ್ಟು, ಆ ದಿನ ರಾತ್ರಿ ಕಳಗಳ ಹಟ್ಟಿಗೆ ಹೋಗಿ ತಂಗಿತು. ಆ ಹಟ್ಟಿಯ ಜನರೊಂದಿಗೆ ಕೂಡಿ ರಾತ್ರಿ 1ಗಂಟೆಯ ತನಕ ಹಾಡಿನ ಕಾರ್ಯಕ್ರಮದೊಂದಿಗೆ "ಹೆಂಡ ನಿಲ್ಲಿಸಿ, ವಸತಿ ಶಾಲೆ ಕೊಡಿ" ಕಾರ್ಯಕ್ರಮದ ಬಗ್ಗೆ ಕೂಲಂಕುಶವಾಗಿ ತಿಳಿಸಲಾಯಿತು.

8ರ ಬೆಳಿಗ್ಗೆ 10ಗಂಟೆಗೆ ಮೆರವಣಿಗೆಯೊಂದಿಗೆ ಕಲ್ಲಳ್ಳಿಗೆ ಹೋಗಿ ಊರಿನಲ್ಲಿ ಮೆರವಣಿಗೆ ಮಾಡಿ ದಲಿತ ಕಾಲೋನಿಯಲ್ಲಿ ಸಭೆ ನಡೆಯಿತು. ಅಲ್ಲಿಂದ ಹೊರಟು ಹೆದ್ದಾರಿಯಿಂದ 1ಕಿ.ಮೀ. ದೂರದಲ್ಲಿ ಸಿಗುವ ದಂಡಿನ ಕುರುಬರಹಟ್ಟಿಗೆ ಹೋಗಿ ಮೆರವಣಿಗೆ ಮಾಡಿ ಸಾಂಸ್ಕೃತಿಕ ಕಾರ್ಯಕ್ರಮ ನೀಡಲಾಯಿತು. ನಂತರ ಮದಕರಿಪುರಕ್ಕೆ ಬಂದು ಊರಿನಲ್ಲಿ ಮೆರವಣಿಗೆ ಮಾಡಿ ಹೆಚ್ಚಿನ ಸಂಖ್ಯೆಯಲ್ಲಿರುವ ಬಣಜಾರ ಕಾಲೋನಿಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮದೊಂದಿಗೆ ಸಭೆ ಮಾಡಲಾಯಿತು.

ಚಿತ್ರದುರ್ಗಕ್ಕೆ ತೆರಳಿ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗಳವರ ಕಚೇರಿಯ ಮುಂದೆ ಹಾಡುಗಳ ಕಾರ್ಯಕ್ರಮ ಹಾಗೂ ಭಾಷಣ ನಡೆಸಿ ಜಿಲ್ಲಾಧಿಕಾರಿಗಳ ಗೈರು ಹಾಜರಿಯಲ್ಲಿ ಉಪ ವಿಭಾಗಾಧಿಕಾರಿಗಳವರಿಗೆ ಮನವಿಪತ್ರ ಕೊಡಲಾಯಿತು. ನಂತರ ಮೆರವಣಿಗೆ ನೇರವಾಗಿ ಜಿಲ್ಲಾ ಪರಿಷತ್ ಕಚೇರಿಗೆ ಬಂದಾಗ ಮಧ್ಯಾಹ್ನ 2ಗಂಟೆಯಾಗಿತ್ತು.

ಜಾಥಾದಲ್ಲಿ ಬಂದ 15ಜನ ಮುಖ್ಯ ಕಾರ್ಯಕರ್ತರಿಂದ ಮಾತ್ರ ಸಂಜೆ 4ಗಂಟೆಯವರೆಗೆ 10ಪಿಕೇಟಿಂಗ್ ನಡೆಯಿತು.

ಜಾಥಾ ಹಾದು ಬಂದ ಹಳ್ಳಿಗಳಲ್ಲಿ ಜನರು ಹೆಚ್ಚಿನ ಸಂಖ್ಯೆಯಲ್ಲಿ ಸೇರುತ್ತಿದ್ದರು. ಕಾರ್ಯಕ್ರಮಕ್ಕೆ ಹೆಚ್ಚಿನ ಸಹಕಾರ ನೀಡುತ್ತಿದ್ದರು. ನಮ್ಮ ಉದ್ದೇಶಗಳನ್ನು ಸಾರ್ವಜನಿಕರ ಮುಂದೆ ಇಟ್ಟಾಗ ಹೆಣ್ಣು ಮಕ್ಕಳು ಹೆಚ್ಚು ಕುತೂಹಲ ತಾಳಿ ಹರ್ಷಿತರಾಗಿ ಯಾರೂ ಮಾಡದ ಕೆಲಸ ನೀವು ಮಾಡುತ್ತೀರಿ ನಿಮಗೆ ದೇವರು ಒಳ್ಳೆಯದು ಮಾಡಲೆಂದು ಹಾರೈಸುತ್ತಿದ್ದರು.

ಧಾರವಾಡ
ಹೆಂಡದ ಸರ್ಕಾರಕ್ಕೆ ಛೀಮಾರಿ !


ಡಿ. 6ರಂದು ಶಿಗ್ಗಾಂವ ತಾಲೂಕಿನಿಂದ ಹೊರಟ ಕಾಲ್ನಡಿಗೆ ಜಾಥಾ ಶಿಗ್ಗಾಂವದಿಂದ ವರೂರು-ವರೂರಿನಿಂದ ಹುಬ್ಬಳ್ಳಿ ತಲುಪಿತು.

ಡಿ. 7ರಂದು ಸಂಜೆ 4 ಗಂಟೆಯಿಂದ ರಾತ್ರಿ ಎಂಟು ಗಂಟೆಯವರೆಗೆ ಶಹರದ ಮುಖ್ಯ ಬೀದಿಗಳಲ್ಲಿ ಬೃಹತ್ ಮೆರವಣಿಗೆಯಲ್ಲಿ ಜಿಲ್ಲೆಯ ಎಲ್ಲ ಕಾರ್ಯಕರ್ತರು ಹಾಗೂ ಸಾರ್ವಜನಿಕರು ಸಕ್ರಿಯವಾಗಿ ಭಾಗವಹಿಸಿದ್ದರು. ಸರ್ಕಾರದ ಕೊಲೆಗಡುಕ ಹೆಂಡದ ನೀತಿಯನ್ನು ಖಂಡಿಸಿ ಧಿಕ್ಕಾರಗಳನ್ನು ಕೂಗುತ್ತಿದ್ದ ಮೆರವಣಿಗೆ ಡಾ॥ ಅಂಬೇಡ್ಕರ್ ಪುತ್ಥಳಿಯ ಬಳಿ ಬಂದು ನಮನ ಸಲ್ಲಿಸಿತು. ಸಹಸ್ರ ಸಂಖ್ಯೆಯಲ್ಲಿದ್ದ ಮೆರವಣಿಗೆ ಕಿತ್ತೂರು ಚೆನ್ನಮ್ಮ ವೃತ್ತದ ಬಳಿ ಬಂದಾಗ ಕೆಲಕಾಲ ವಾಹನ ಸಂಚಾರಕ್ಕೆ ಅಡೆತಡೆ ಉಂಟಾಯಿತು.

ಡಿ. 8ರಂದು ಹುಬ್ಬಳ್ಳಿಯಿಂದ ಹೊರಟ ಜಾಥಾ ಧಾರವಾಡ ನಗರ ತಲುಪಿ ಜಿಲ್ಲಾ ಪರಿಷತ್ ಕಚೇರಿಯ ಎದುರು ಪಿಕೆಟಿಂಗ್ ಪ್ರಾರಂಭಿಸಿತು. ಜಾಥಾವನ್ನು ಸ್ವಾಗತಿಸಲು ಆಗಲೇ ಜಿಲ್ಲಾ ಪೊಲೀಸ್ ಪಡೆ ಸಜ್ಜಾಗಿ ಕಾದಿತ್ತು!

'ವಿಷದ ಹೆಂಡ ಬೇಡ-ವಸತಿ ಶಾಲೆ ಬೇಕು' ಎಂಬ ಮುಖ್ಯ ಬೇಡಿಕೆಯನ್ನು ಮುಂದಿಟ್ಟುಕೊಂಡು ಜಿಲ್ಲಾ ಪರಿಷತ್ ಕಾರ್ಯಾಲಯವನ್ನು ಮಧ್ಯಾಹ್ನ ಒಂದು ಗಂಟೆಯವರೆಗೆ ಪಿಕೆಟಿಂಗ್ ಮಾಡಲಾಯಿತು. ಪಿಕೆಟಿಂಗ್‌ನಲ್ಲಿ ಜಿಲ್ಲೆಯ ಬ್ಯಾಡಗಿ, ಶಿಗ್ಗಾಂವ, ಸವಣೂರು ಹಾನಗಲ್ಲ, ಬಂಕಾಪುರ, ಲಕ್ಷ್ಮೇಶ್ವರ, ಹಾಗೂ ಹಾವೇರಿ ತಾಲೂಕ ಶಾಖೆಗಳು ಭಾಗವಹಿಸಿದ್ದವು. ಬ್ಯಾಡಗಿ ಸಂಚಾಲಕ ಶ್ರೀಕಾಂತ ಹುಣಸಿಮರದ. ಸಂಘಟನಾ ಸಂಚಾಲಕ ಕೃಷ್ಣಕಲ್ಮಣಿ, ಪ್ರಭಾಕರ ಕುಸಗೂರ, ಕಂಬಸಪ್ಪ ಅಂತರವಳ್ಳಿ, ಎಚ್.ಎಚ್. ರಾರಾವಿಯವರು ಜನತಾ ಸರ್ಕಾರಕ್ಕೆ ಛೀಮಾರಿ ಹಾಕಿ ಎಚ್ಚರಿಸಿದರು.

● ಶ್ರೀಕಾಂತಶಾಳೆ, ಬ್ಯಾಡಗಿ



ಡಾ॥ ಬಾಬಾಸಾಹೇಬ್ ಅಂಬೇಡ್ಕರ್
ಬರಹಗಳು ಮತ್ತು ಭಾಷಣಗಳು
ಸಂಪುಟ–4
ಅಪ್ರಕಟಿತ ಬರಹಗಳು
ಹಿಂದೂ ಧರ್ಮದಲ್ಲಿನ ವಿರೋಧಾಭಾಸಗಳು
ಪುಟ 360 ಬೆಲೆ 35 ರೂ.
ಪ್ರಕಾಶಕರು : ಮಹಾರಾಷ್ಟ್ರ ಸರ್ಕಾರದ
ಶಿಕ್ಷಣ ಇಲಾಖೆ

ಸಂಪಾದಕ ಮಂಡಳಿ
1. ಪ್ರೊ॥ ರಾಂ ಮೇಘೆ ಅಧ್ಯಕ್ಷ
2. ಕು॥ ಚಂದ್ರಿಕಾ ಕೆನಿಯಾ ಉಪಾಧ್ಯಕ್ಷೆ
   ಶಿಕ್ಷಣ ಖಾತೆಯ ರಾಜ್ಯ ಸಚಿವೆ
3. ಆರ್.ಎಸ್. ಗವಾಯಿ ,,
   ವಿಧಾನ ಪರಿಷತ್ ಅಧ್ಯಕ್ಷ
4. ಬಿ.ಸಿ. ಕಾಂಬಳೆ ಸದಸ್ಯ
5. ಡಾ॥ ಪಿ.ಟಿ. ಬೊರಾಳೆ ,,
6. ಡಾ॥ ವಿ.ಬಿ. ಕೊಲ್ಟೆ ,,
7. ಘನಶ್ಯಾಂ ತಳವಟ್ಕರ್ ,,
8. ಶಂಕರರಾವ್ ಖರಾತ್ ,,
9. ಶಾಂತಾಬಾಯಿ ದಾನಿ ,,
10. ಪ್ರಕಾಶ ವೈ. ಅಂಬೇಡ್ಕರ್ ,,
11. ಆರ್.ಆರ್. ಭೋಲೆ ,,
12. ಎಸ್.ಎಸ್. ರೇಗೆ ,,
13. ಡಾ॥ ಭಾಲಚಂದ್ರ ಫಡಕೆ ,,
14. ಬಾಬುರಾವ್ ಬಾಗುಲ್ ,,
15. ದಯಾ ಪವಾರ್ ,,
16. ಪ್ರೊ॥ ಅರುಣ ಕಾಂಬಳೆ ,,
17. ಪ್ರೊ॥ ರಮಾಕಾಂತ ಯಾದವ ,,
18. ವಾಮನ ನಿಂಬಾಳ್ಕರ್ ,,
19. ಶಿಕ್ಷಣ ಇಲಾಖೆ ಕಾರ್ಯದರ್ಶಿ ,,
20. ಶಿಕ್ಷಣ ನಿರ್ದೇಶಕರು, ಪುಣೆ ಸದಸ್ಯ
    ಕಾರ್ಯದರ್ಶಿ
21. ವಸಂತಮೂನ್
    ವಿಶೇಷ ಕಾರ್ಯನಿಮಿತ್ತ ಅಧಿಕಾರಿ

ಹಿಂದೂ ವಿರೋಧಾಭಾಸಗ
ಮತೀಯ ಶಕ್ತಿಗಳ

ರೋಗಗ್ರಸ್ತ ಹಿಂದೂ ಮತಕ್ಕೆ ತನ್ನ ಹರಿತ ಚಿಂತನೆಯ ಮೂಲಕ ಶಸ್ತ್ರ ಚಿಕಿತ್ಸೆಗೆ ಯತ್ನಿಸಿದವರು ಡಾ॥ ಬಿ.ಆರ್. ಅಂಬೇಡ್ಕರ್.

ಆದರ್ಶ ಪುರುಷ ರಾಮನ ವ್ಯಕ್ತಿತ್ವದ ಕೊರತೆಗಳ ವಿಶ್ಲೇಷಣೆಯೇ 'ರಿಡ್ಲ್ ಇನ್ ಹಿಂದೂಯಿಸಂ' (ಹಿಂದೂ ಧರ್ಮದಲ್ಲಿನ ವಿರೋಧಾಭಾಸಗಳು.)

ಈ ಪುಸ್ತಕದ ವಿರುದ್ಧ ಇತ್ತೀಚೆಗೆ ಮತಾಂಧ ನೀಚರು ಒಂದು ವಿವಾದವನ್ನೇ ಸೃಷ್ಟಿಸಿದರು. ಇದನ್ನು ಕೊಂಡಾ

ಡಿದ್ದ ಮಹಾರಾಷ್
ಪುಸ್ತಕವನ್ನು ಹಿ
ಧಾರ್ಮಿಕ ಗ್ರ
ಅರ್ಥಮಾಡಿಕೊ
ಕಡೆ ವಿರೋಧಾ
ಪುರಾಣಗಳ ಬಗೆ
ವ್ಯಕ್ತಪಡಿಸುವವ
ನಮ್ಮ ಚಿಂತನೆಯ

ಅಕ್ಟೋಬರ್ ತಿಂಗಳ ಕೊನೆ ವಾರದಲ್ಲಿ ಮಹಾರಾಷ್ಟ್ರ ಸರ್ಕಾರ ಪ್ರಕಟಿಸಿದ ಈ ಪುಸ್ತಕ ರಾಜ್ಯಾದ್ಯಂತ ಬಿರುಗಾಳಿಯನ್ನೆಬ್ಬಿಸಿದೆ. ಡಾ॥ ಬಾಬಾಸಾಹೇಬ್ ಅಂಬೇಡ್ಕರ್ ಅವರ ಬರಹ ಹಾಗೂ ಭಾಷಣಗಳನ್ನೂ ಇದುವರೆಗೆ ಮೂರು ಸಂಪುಟದಲ್ಲಿ ಪ್ರಕಟಿಸಿರುವ ಮಹಾರಾಷ್ಟ್ರ ಸರ್ಕಾರ, ಅವುಗಳನ್ನು ಸಮರ್ಪಕವಾಗಿ ಜನತೆಗೆ ತಲುಪಿಸುವಲ್ಲಿ ವಿಫಲವಾಗಿದೆ ಎಂಬ ಅಪಖ್ಯಾತಿಯನ್ನು ಹೊತ್ತು ಕೊಂಡಿತು. ಈಗ ನಾಲ್ಕನೇ ಸಂಪುಟ ಪ್ರಕಟವಾಗಿ ಒಂದು ತಿಂಗಳಲ್ಲೇ ರಾಜ್ಯದಲ್ಲಿ ದಲಿತ ವಿರೋಧಿ ಅಲೆ ಎದ್ದಿತ್ತು.

ಪ್ರಥಮವಾಗಿ ಈ ಪುಸ್ತಕಕ್ಕೆ ವಿರೋಧ ಪ್ರಕಟವಾಗಿದ್ದು ಅಮರಾವತಿಯಲ್ಲಿ. ಅಲ್ಲಿನ ಮರಾಠಾ ಮಹಾ ಸಂಘದ ಮುಂದಾಳು ಶಶಿಕಾಂತ ಪವಾರ್ ಪುಸ್ತಕದ ಪ್ರತಿಯನ್ನು ಸುಟ್ಟು ಹಾಕಿ ಪ್ರತಿಭಟಿಸಿದರು. ನಂತರ ಈ ಅಸಮಾಧಾನದ ಹೊಗೆಗೆ ಎಣ್ಣೆ ಸುರಿದದ್ದು ಇಂಡಿಯನ್ ಎಕ್ಸ್‌ಪ್ರೆಸ್ ಬಳಗದ 'ಲೋಕ ಸತ್ತಾ' ಮರಾಠಿ ದಿನ ಪತ್ರಿಕೆ. 'ಹಿಂದೂ ಧರ್ಮೀಯರನ್ನು ಘಾಸಿಗೊಳಿಸಿ ನೋವು ಉಂಟು ಮಾಡುವ ಇಂಥ ಪುಸ್ತಕವನ್ನು ಪ್ರಕಟಿಸಿರುವ ಮಹಾರಾಷ್ಟ್ರ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡ 'ಲೋಕಸತ್ತಾ' ಸಂಪಾದಕ ಮಾಧವ ಗಡಕರಿ "ರಾಮ ಮತ್ತು ಕೃಷ್ಣರನ್ನು ತೀಕ್ಷ್ಣವಾಗಿ ಖಂಡಿಸುವ ಇಂಥ ಪುಸ್ತಕ ಪ್ರಕಟಿಸುವ ಮೂಲಕ ಜಾತಿ ಗಲಭೆಗೆ ಆಸ್ಪದ ನೀಡಿದಂತಾಗುವುದಿಲ್ಲವೇ" ಎಂದು ಪ್ರಶ್ನಿಸಿದ್ದರು.

ಮಾಧವ ಗಡ್ಕರಿ ಅವರ ಇಷ್ಟು ಸೂಚನೆ ಮರಾಠಾ ಮಹಾಸಂಘಕ್ಕೆ ಸಾಕಾಗಿತ್ತು. ಮಹಾರಾಷ್ಟ್ರದ ಮಧ್ಯಮ ಜಾತಿ ಮರಾಠಾರ ಪ್ರಬಲ ಸಂಘಟನೆಯಾಗಿರುವ ಈ ಮಹಾಸಂಘ ಕಣಕ್ಕಿಳಿಯಿತು. ಮರಾಠಾವಾಡಾ ವಿಶ್ವವಿದ್ಯಾಲಯಕ್ಕೆ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ಹೆಸರು ಸೇರಿಸಬೇಕೆಂದು ಆಗಿನ ಮುಖ್ಯಮಂತ್ರಿ ಶರದ್ ಪವಾರ್ ಸಚಿವ ಸಂಪುಟ ಕೈಗೊಂಡಿದ್ದ ತೀರ್ಮಾನವನ್ನು ಜಾರಿಗೆ ತನ್ನಿ ಎಂಬ ಒತ್ತಾಯದ ಆಂದೋಲನ ಪ್ರಾರಂಭವಾಗಿದ್ದಾಗ ಇದೇ ಮರಾಠಾ ಮಹಾಸಂಘ ದಲಿತ ವಿರೋಧಿ ಚಳವಳಿ ನಡೆಸಿತ್ತು: ಮರಾಠಾ ಮಹಾಸಂಘದ ನೀಚತನ ಯಾವ ಮಟ್ಟಕ್ಕೆ ಹೋಗಿತ್ತೆಂದರೆ ಆಗ ಮರಾಠಾವಾಡಾ ಪ್ರದೇಶದ ಹಳ್ಳಿ ಹಳ್ಳಿಗಳಲ್ಲಿನ ದಲಿತರ ಕೇರಿಗಳಿಗೆ ಬೆಂಕಿಯಿಟ್ಟಿದ್ದರು; ಬೋರ್‌ವೆಲ್‌ಗಳನ್ನು ಕೆಡಿಸಿ ಹಾಕಿ ದಲಿತರಿಗೆ ನೀರು ಸಿಗದ ಹಾಗೆ ಮಾಡಿದ್ದರು.

ಈಗ ಮರಾಠಾ ಮಹಾಸಂಘದ ಒತ್ತಾಯಕ್ಕೆ ಮಣಿದ ಮುಖ್ಯಮಂತ್ರಿ ಎಸ್.ಬಿ. ಚವಾಣ್ ನವೆಂಬರ್ 16ರಂದು ಪುಸ್ತಕವನ್ನು ಹಿಂತೆಗೆದುಕೊಂಡು "ಪುಸ್ತಕದ ಕಡೆಯಲ್ಲಿನ ಒಂದನೇ ಪರಿಶಿಷ್ಟ ಭಾಗವನ್ನು ಕಿತ್ತು ಹಾಕಲಾಗುವುದೆಂಬ" ನಿರ್ಧಾರ ಪ್ರಕಟಿಸಿದ್ದಾರೆ.

ನವೆಂಬರ್ 9 ರಂದು ಚಳಿಗಾಲದ ಅಧಿವೇಶನ ಆರಂಭವಾದ ಹೊತ್ತಿನಲ್ಲೇ ನಾಗಪುರದಲ್ಲಿ ಮುಂತ್ರಾಲಯ

ಭಾರತದ ಸಂವಿಧಾನ

ಸಂವಿಧಾನ ಶಿಲ್ಪಿ ಹಾಗೂ ಪ್ರಭಾವಿ ಸ
ಅಂಬೇಡ್ಕರ್ ಉದ್ದಾಮ ಪಂಡಿತರೂ ಸಕ್ರಿ
ಕೆಳವರ್ಗಗಳ ಮಹಾ ನಾಯಕರಾಗಿದ್ದ ಅವರ
ವಿರುದ್ಧ ನಿರಂತರ ಸಂಘರ್ಷ ನಡೆಸಿದ್ದರು.
ವಿಶ್ವ ಬಂಧುತ್ವಗಳ ಆಧಾರದ ಮೇಲೆ ಅವ

ಹಿಂದುಳಿದ ವರ್ಗಗಳನ್ನು ಕಾಡುತ್ತಿ
ಅಂಬೇಡ್ಕರ್ ಅವರು ನಡೆಸಿದ ಕ್ರಾಂತಿಕಾರಿ
ಕೋಪಗಳಿಗೆ ಭಾರತೀಯ ಸಮಾಜ ಋಣಿ

ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ
ಅಂಬೇಡ್ಕರ್ ಅವರಂತೆಯೇ ಮಹಾರಾಷ್ಟ್ರ
ಕ್ಕಾಗಿ ಪಣ ತೊಟ್ಟಿದೆ. ಡಾ॥ ಅಂಬೇಡ್ಕರ್
ಬೆಳಕಾಗುತ್ತದೆ.

ಸಮಗ್ರ ಸಾಹಿತ್ಯ ಪ್ರಕಟಣೆ ಯೋಜ
ಹಾಗೂ ಭಾಷಣಗಳ ಮೂರು ಸಂಪುಟ

ಪ
ಧಾರೆ

ುಖ್ಯಮಂತ್ರಿ, ಶಿಕ್ಷಣ ಸಚಿವರೇ
ಮುಕೊಂಡಿದ್ದಾರೆ.
ಪೌರಾಣಿಕ ಕತೆಗಳನ್ನು ನಾವು
ಬಗೆ ಯಾವುದು? ನೂರಾರು
ಗಳಿರುವ ಇಂಥ ತೀರ ಶಾಸ್ತ್ರ-
್ಯಯನ ನಡೆಸಿ, ಅಭಿಪ್ರಾಯ
ನಾವು ಸಹಿಸುವುದಿಲ್ಲವೇ ?
ಾಸವಾಗಬೇಕೇ ಇಲ್ಲವೇ ?



ಸರ್ಕಾರದ ಅವಿವೇಕಿ ತೀರ್ಮಾನವನ್ನು ಪ್ರತಿಭಟಿಸಲು ಮುಂಬಯಿಯ ಮಂತ್ರಾಲಯದ ಎದುರು ನೆರೆದ ಒಂದು ಲಕ್ಷ ದಲಿತರು

(ವಿಧಾನಸೌಧ)ದ ಮುಂದೆ 10ಸಾವಿರ ಜನರ ಬೃಹತ್ ಪ್ರದರ್ಶನ ನಡೆಸಿದ ಸನಾತನವಾದಿ ಮರಾಠಾ ಮಹಾಸಂಘ ಚವಾಣ್ ಅವರ ಪ್ರತಿಕೃತಿ ಸುಟ್ಟು ಹಾಕಿತು.

ಜಾತಿವಾದಿ ಮರಾಠಾ ಮಹಾಸಂಘವನ್ನು ಸಮಾಧಾನ ಪಡಿಸಲು ಮಹಾರಾಷ್ಟ್ರ ರಾಜ್ಯ ಸರ್ಕಾರ ಕೈಗೊಂಡ ತೀರ್ಮಾನದಿಂದ ಚವಾಣ್ ತಮ್ಮ ತಿಕ್ಕಲುತನವನ್ನು ಸಾಬೀತು ಪಡಿಸಿದ್ದಾರಷ್ಟೇ ಅಲ್ಲ. ದಲಿತ ವಿರೋಧಿ ಬಣಗಳ ಜತೆಗೇ ಒಂದಾಗುವ ತಮ್ಮ ಹುನ್ನಾರವನ್ನು ಬಯಲಿ[illegible]ದ್ದಾರೆ.

ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ಅವರು 45ವರ್ಷಗಳಷ್ಟು ಹಿಂದೆ(1942)ಬರೆದ ಈ ಪುಸ್ತಕದ ಒಂದನೇ ಪರಿಶಿಷ್ಟದಲ್ಲಿ ರಾಮ ಮತ್ತು ಕೃಷ್ಣರನ್ನು ಕುರಿತು ಭಾರತೀಯ ಹಿಂದೂಗಳಲ್ಲಿ ಸಾಮಾನ್ಯವಾಗಿ ಮನೆ ಮಾಡಿರುವ ಗೌರವ ಆದರಗಳಿಗೆ ಕಾರಣಗಳೇನು ಎಂಬುದನ್ನು ವಿಶ್ಲೇಷಿಸಿದ್ದಾರೆ. ವಜ್ರವನ್ನು ಭೇದಿಸುವ ತಮ್ಮ ಚಿಂತನಾಕ್ರಮದಿಂದ ಡಾ॥ಬಾಬಾ ಸಾಹೇಬ್ ಯಾವ ಸಂಕೋಚವು ಇಲ್ಲದೆ ತಮ್ಮ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದಾರೆ. ಹಾಗೆಂದು ಪರಿಶಿಷ್ಟರು ಯಾವುದೇ ಹಂತದಲ್ಲಿ ಅವರು ರೊಚ್ಚಿನ ನಿಲುವು ತಾಳಿಲ್ಲ. ಬಹುಸಂಖ್ಯಾತರ ಗೌರವಾದರಗಳಿಗೆ ಪಾತ್ರರಾಗಿರುವ ಗಾಥೆಯೊಂದನ್ನು ಅರ್ಥ ಮಾಡಿಕೊಳ್ಳಲು ಯತ್ನಿಸಿದ್ದನ್ನು ಲೇಖನವಾಗಿಸಿದ್ದಾರೆ.

ಹಾಗೆ ನೋಡಿದರೆ ಈ ಪುಸ್ತಕ, ಪರಿಶಿಷ್ಟದ ಮೂಲಕ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ದಿಗ್ಭ್ರಮೆಗೊಳಿಸುವ ಯಾವ ಹೊಸ ಸತ್ಯವನ್ನು ಧರ್ಮಾಂಧ ಹಿಂದೂಗಳ ಮುಂದಿಟ್ಟಿಲ್ಲ;ಹಿಂದೂ ಮನಸಿಗೆ ಬೆಂಕಿಯಿಡುವ ಮನೋಭಾವ ಡಾ॥ ಅಂಬೇಡ್ಕರ್ ಅವರದು ಅಲ್ಲವೇ ಅಲ್ಲ; ಹೊಸ ಚಿಂತನೆಯ ಮೂಸೆಯಲ್ಲಿಂದ ಹೊರ ಬೀಳುವ ಸತ್ಯ ವಿಚಾರ ಅಪ್ರಿಯವಾಗಿರಲು ಸಾಧ್ಯ; ಅಂಥ ವಿಚಾರ ಚುರುಕು ಮುಟ್ಟಿಸಲು ಸಾಧ್ಯ;

ಡಾ॥ ಅಂಬೇಡ್ಕರ್ ಅವರ ಗುರಿಯೂ ಅದೇ.ಪರಮ ಪವಿತ್ರ ಮಹಾಗ್ರಂಥ ಎಂದು ಪೂಜಿಸುವುದೇ ಅಲ್ಲದೇ ಅವುಗಳಲ್ಲಿನ ಪ್ರಧಾನ ಪಾತ್ರಗಳಾದ ರಾಮ, ಕೃಷ್ಣರನ್ನು ದೇವರ ಅವತಾರ ಎಂದೆಲ್ಲ ಆರಾಧಿಸುವ ಹಿಂದೂ ಮನಸಿಗೆ ಅವರು ಹಲವು ಹತ್ತು ಸವಾಲುಗಳನ್ನೂ ಎಸೆದಿದ್ದಾರೆ. "ನಿಮ್ಮ ಭಗವಾನ್ ಶ್ರೀ ರಾಮಚಂದ್ರ ಏಕಪತ್ನೀವ್ರತಸ್ಥನೇ ?, ನ್ಯಾಯ ಮಾರ್ಗ ಪರಿಪಾಲಕನೇ ? ವೃದ್ಧರು, ಮಹಿಳೆಯರು, ಬಾಲ-ಬಾಲೆಯರ ಹೃದಯ ಅರಿಯಬಲ್ಲವನೇ ?"

(16ನೇ ಪುಟಕ್ಕೆ)

ಡಾ॥ ಅಂಬೇಡ್ಕರ್
ಸದಸ್ಯರೆಂದು ಖ್ಯಾತರಾಗಿದ್ದ ಡಾ॥
ಾಜ ಸುಧಾರಕರೂ ಆಗಿದ್ದವರು.
ೂ ಸಮಾಜದ ಶೋಷಣಾ ಮೌಲ್ಯಗಳ
, ಸಮಾನತೆ ನ್ಯಾಯ ಹಾಗೂ
ೆ ಸಮಾಜ ಕಟ್ಟಲು ಶ್ರಮಿಸಿದ್ದರು.
ಸಮಸ್ಯೆಗಳ ಪರಿಹಾರಕ್ಕಾಗಿ ಡಾ॥
ಟ, ಅವರ ಮಾನವೀಯ ದೃಷ್ಟಿ

ೀವನವನ್ನು ಮುಡಿಪಾಗಿಟ್ಟ ಡಾ॥
ವೂ ಹಿಂದುಳಿದ ವರ್ಗಗಳ ಕಲ್ಯಾಣ
ೆ ಚಿಂತನೆ ನವ ಪೀಳಿಗೆಗೆ ಹೊಸ

ಲ್ಲಿ ಡಾ॥ ಅಂಬೇಡ್ಕರ್ ಅವರ ಬರಹ
ಕಟಿಸಿವ ಹೆಮ್ಮೆ ನಮ್ಮ ಸರ್ಕಾರದ್ದು.

● ಎಸ್.ಬಿ. ಚವಾಣ್
ಮಹಾರಾಷ್ಟ್ರ ಮುಖ್ಯಮಂತ್ರಿ

'ದಿ ರಿಡ್ಲ್ ಇನ್ ಹಿಂದೂಯಿಸಂ' ಕೃತಿಗೆ ಮಹಾರಾಷ್ಟ್ರ ಮುಖ್ಯಮಂತ್ರಿ ಎಸ್.ಬಿ ಚವಾಣ್ ಮತ್ತು ಶಿಕ್ಷಣ ಸಚಿವ ಪ್ರೊ॥ ರಾಂ ಮೇಘೆ ಬರೆದ ಅಭಿನಂದನಾ ಬರಹಗಳು.

ಎರಡು ಮುನ್ನುಡಿಗಳು

ಭಾರತೀಯ ಸಮಾಜ ವ್ಯವಸ್ಥೆ ಹಾಗೂ ತತ್ವಜ್ಞಾನ ಪ್ರಕಾಂಡ ಪಂಡಿತರಲ್ಲಿ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ಅವರೂ ಒಬ್ಬರು. ಅವರ ಚಿಂತನಾಮಾರ್ಗವು ಸಾಮಾಜಿಕ ಮತ್ತು ಧಾರ್ಮಿಕ ಗೋಜಲುಗಳಿಂದ ನಮ್ಮನ್ನು ಬಿಡುಗಡೆಗೊಳಿಸಬಲ್ಲದು. ಭಾರತದ ಸಾಮಾಜಿಕ, ರಾಜಕೀಯ ಸ್ಥಿತಿಯ ಬೆಳವಣಿಗೆಯನ್ನು ಅಧ್ಯಯನ ಮಾಡುವವರು ನಿರೀಕ್ಷಿಸಿದ್ದಂತೆ ಮೂರು ಸಂಪುಟಗಳನ್ನೂ ಪ್ರಕಟಿಸಿ ಈಗ ನಾಲ್ಕನೆಯದನ್ನು ನಿಮ್ಮ ಮುಂದಿಡುತ್ತಿದ್ದೇವೆ.

ಭಾರತದ ಆಧ್ಯಾತ್ಮಿಕ ಹಾಗೂ ಸಾಮಾಜಿಕ ಸಮಸ್ಯೆಗಳ ವಿಶ್ಲೇಷಣೆಯಿರುವ ಈ ಸಂಪುಟವು ತರ್ಕಶುದ್ಧ ಚಿಂತನೆಗೆ ಅನುವು ಮಾಡಿಕೊಡಬಲ್ಲದು,

● ಪ್ರೊ॥ ರಾಂ ಮೇಘೆ
ಮಹಾರಾಷ್ಟ್ರ ಶಿಕ್ಷಣ ಸಚಿವ

ಅಹಿಂಸೆ ಬೇಕಿಲ್ಲ

ಹಿಂದೂ ಧರ್ಮ ತ್ಯಜಿಸಿ ಹೋದ ಡಾ॥ ಅಂಬೇಡ್ಕರ್ ಅವರಿಗೆ ಹಿಂದೂ ಧರ್ಮದ ದೇವತೆಗಳನ್ನು ಟೀಕಿಸುವ ಅಧಿಕಾರವೇ ಇಲ್ಲ. ಹಿಂದೂ ಧರ್ಮದಷ್ಟು ಸಹಿಷ್ಣು ಧರ್ಮವೇ ಇಲ್ಲ. ಮಹಾತ್ಮಾ ಜ್ಯೋತಿಬಾ ಫುಲೆ, ಅಗರ್‌ಕರ್, ನನ್ನ ತಂದೆ ಪ್ರಬೋಧನಕಾರ್ ಠಾಕ್ರೆ ಮುಂತಾಗಿ ಅಸಂಖ್ಯಾತ ಸುಧಾರಣಾವಾದಿಗಳನ್ನು ಹಿಂದೂ ಧರ್ಮ ಸಹಿಸಿದೆ.

ಆದರೆ ಅಂಬೇಡ್ಕರ್ ಗುರಿ ಸುಧಾರಣೆಯಲ್ಲ ; ದ್ವೇಷದ ಬೆಂಕಿ ಹಚ್ಚುವುದು. ದೇವರಲ್ಲಿ ನಂಬಿಕೆಯಿರದವರು ಅಂಬೇಡ್ಕರ್ 'ಭೀಮರಾವ್' ಎಂಬ ತಮ್ಮ ಹೆಸರನ್ನೇಕೆ ಬದಲಿಸಿಕೊಳ್ಳಲಿಲ್ಲ. ಅರ್ಜುನ (ಡಾಂಗಳೆ) ರಾಮದಾಸ್ (ಅಠವಲೆ) ಮುಂತಾದ ದಲಿತ ನಾಯಕರೂ ಕೂಡ ತಮ್ಮ ಹೆಸರು ಬದಲಿಸಿಕೊಂಡಿಲ್ಲವೆ.

ಜಾತ್ಯಾತೀತ ಮೌಲ್ಯಗಳನ್ನು ಸಾರುವ ಸರ್ಕಾರ ಹಿಂದೂ ಧರ್ಮದ ದೇವತೆಗಳನ್ನು ಟೀಕಿಸುವ ಪುಸ್ತಕವನ್ನು ಯಾಕೆ ಪ್ರಕಟಿಸಬೇಕು ? "ಪ್ರವಾದಿ ಮಹಮ್ಮದ್ ಮೆಕ್ಕಾದಿಂದ ಮದೀನಾಕ್ಕೆ ಓಡಿ ಹೋದರು" ಎಂಬ ಒಂದೇ ವಾಕ್ಯ ಇದ್ದ ಮಾತ್ರಕ್ಕೆ ಪ್ರತಿಭಟಿಸಿದ ಮುಸಲ್ಮಾನರ ಒತ್ತಡಕ್ಕೆ ಮಹಾರಾಷ್ಟ್ರ ಸರ್ಕಾರ ಮಣಿದಿರಲಿಲ್ಲವೇ ? ನಾಮದೇವ ಢಸಾಳ್‌ರಂಥ ದಲಿತ



[illegible] ...ದರೂ ನಾವು ಸಹಿಸಬೇಕೇ ?

ನಾನು ಮ... ಸ್ಪಷ್ಟಪಡಿಸುತ್ತೇನೆ ; ನಮಗೆ ಅಹಿಂಸೆಯಲ್ಲಿ ನಂ...ಲ್ಲ. ಸಹನೆ ಇನ್ನು ಸಾಕು.

ಸಾಮಾನ್ಯ ದಲಿತರ ವಿರುದ್ಧ ನಮ್ಮ ಹೋರಾಟವಲ್ಲ : ಸರಿಯಾಗಿ ನಾಲ್ಕು ಅಕ್ಷರಗಳನ್ನು ಕಲಿಯುವ ಮುಂಚೆಯೇ ದಲಿತ ನಾಯಕರಾಗ ಹೊರಡುವವರ ವಿರುದ್ಧ ನಮ್ಮ ಯುದ್ಧ.

ಕಮ್ಯುನಿಸ್ಟರ್-ಸಮಾಜವಾದಿಗಳಿಗೆ ನೆಲೆಯೇ ಇಲ್ಲ. ಹಾಗಾಗಿ ಅವರು ದಲಿತರ ಹಿಂದೆ ನಿಂತು ತಮ್ಮ ತುತ್ತೂರಿ ಊದ... ಆರಂಭಿಸಿದ್ದಾರೆ.

● **ಬಾಳ ಠಾಕ್ರೆ**
ಶಿವಸೇನಾ ನಾಯಕ.



ಕೆಲವು ಅಭಿಪ್ರಾಯಗಳು

'ಹಿಂದೂ ಧರ್ಮದಲ್ಲಿನ ಒಗಟುಗಳು' ಪುಸ್ತಕದ ಬಗ್ಗೆ ಮಹಾರಾಷ್ಟ್ರ ಸರ್ಕಾರದ ಮೇಲೆ ಸಮಾನತಾವಾದಿಗಳು ಹಾಗೂ ಜಾತಿ-ಕೋಮುವಾದಿಗಳ ಒತ್ತಡ ನಿರಂತರವಾಗಿ ಸಾಗಿದೆ. ಮಹಾರಾಷ್ಟ್ರದ ಸಾರ್ವಜನಿಕ ಜೀವನದಲ್ಲಿ ಮಹತ್ವದ ಸ್ಥಾನ ಹೊಂದಿರುವ ಕೆಲವರ ಅಭಿಪ್ರಾಯ ಇಲ್ಲಿವೆ.

ಕೃಪೆ : ದಿ ಸಂಡೇ ಅಬ್ಸರ್ವರ್

ಕೊಲೆಯಾಗುತ್ತೆ

"ಈ ಪುಸ್ತಕ ಪ್ರಕಟವಾದ ದಿನ ಬ್ರಾಹ್ಮಣರು ನನ್ನ ಕೊಲೆ ಮಾಡುತ್ತಾರೆ ; ಅವರ ಡಂಭಾಚಾರವನ್ನೆಲ್ಲ ನಾನು ಇಲ್ಲಿ ಬಯಲು ಮಾಡಿರುವೆ."

'ಹಿಂದೂ ಧರ್ಮದಲ್ಲಿನ ವಿರೋಧಾಭಾಸಗಳು' ಪುಸ್ತಕ ಬರೆದು ಮುಗಿಸಿದಾಗ ಡಾ॥ ಬಾಬಾ ಸಾಹೇಬ ಅಂಬೇಡ್ಕರ್ ಆಡಿದ ನುಡಿಗಳಿವು.

ಡಾ॥ ಅಂಬೇಡ್ಕರ್ ಅವರ ಸಹವರ್ತಿ ಎನ್. ಶಿವರಾಜ್ ಎಂಬವರು ಹೇಳಿದ್ದ ಇನ್ನೊಂದು ಮಾತು ನೆನಪಾಗುತ್ತಿದೆ. ಅವರು ಹೇಳಿದ್ದರು : "ಅಂಬೇಡ್ಕರ್ ಅವರನ್ನು ಇಂದು ಹೇಗೋ ಅದುಮಿಡುತ್ತಿದ್ದಾರೆ ಈ ಹಿಂದೂಗಳು. ಆದರೆ ಅಂಬೇ... ಅಗಲಿದ ನಂತರ ಅವರ ವಿಚಾರವನ್ನೂ ಅದುಮಿಡಲು ಯಾವ ಹಿಂದೂವಿಗೂ ಸಾಧ್ಯವಿಲ್ಲ."

ಎರಡೂ ಮಾತುಗಳು ನಿಜವಾಗಿವೆ.

ಹಿಂದೂ ಧರ್ಮವು ಚಾರ್ವಾಕ, ಬುದ್ಧ, ಕಬೀರ್, ಫುಲೆ, ಮುಂತಾದ ಅಸಂಖ್ಯಾತ ಹರಿಕಾರರನ್ನು ಅರಗಿಸಿಕೊಂಡಿರಬಹುದು ; ಆದರೆ ಹಿಂದೂ ಧರ್ಮದ ಹೊಟ್ಟೆಗೆ ಜೀರ್ಣವಾಗುವ ಕಡಲೆ ಅಂಬೇಡ್ಕರ್ ಅಲ್ಲ.

ಹಾಗೆ ನೋಡಿದರೆ ಹಿಂದೂ ಧರ್ಮದ ಪೂರ್ಣ ಬಣ್ಣವನ್ನು ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ಬಯಲಿಗೆಳೆದಿರುವುದು ಈ ಪುಸ್ತಕದಲ್ಲಿಲ್ಲ; "ಪ್ರಾಚೀನ ಭಾರತದಲ್ಲಿ ಕ್ರಾಂತಿ ಮತ್ತು ಪ್ರತಿ ಕ್ರಾಂತಿ" ಎಂಬ ಮೂರನೇ ಸಂಪುಟದಲ್ಲಿ. (ಈ ಸಂಪುಟವನ್ನು ಮಹಾರಾಷ್ಟ್ರ ಸರ್ಕಾರ ಈಗಾಗಲೇ ಪ್ರಕಟಿಸಿದೆ) ಹಿಂದೂಗಳು ವಿರೋಧಿಸುವಂಥ ಅಂಶಗಳು "ಜಾತಿ ವಿನಾಶ" ಪುಸ್ತಕದಲ್ಲೂ ಇವೆ. ವಾಲ್ಮೀಕಿ ರಾಮಾಯಣವನ್ನು ಡಾ॥ ಅಂಬೇಡ್ಕರ್ ಪ್ರಮಾಣವಾಗಿ ಪರಿಗಣಿಸಿರುವುದರಿಂದ ಮರಾಠಾ ಮಹಾ ಸಂಘ ಮತ್ತು ಶಿವಸೇನೆ ಜನ ವಾಲ್ಮೀಕಿ ರಾಮಾಯಣವನ್ನೂ ಬಹಿಷ್ಕರಿಸುವರೇ ?


ಧರ್ಮದ ವಿಮರ್ಶೆಯಿಂದಲೇ ಎಲ್ಲಾ ಚಿಂತನೆ ಆರಂಭವಾಗುತ್ತದೆ ಎಂಬ ಕಾರ್ಲ್‌ಮಾರ್ಕ್ಸ್ ಹೇಳಿಕೆಯನ್ನು ನಾನು ಒಪ್ಪುತ್ತೇನೆ. ಶಂಬೂಕ, ವಾಲಿಯನ್ನು ಕೊಲೆ ಮಾಡಿದ್ದು ರಾಮನಿಗೆ ಭೂಷಣವೇ ? ಮೂವರು ಸ್ತ್ರೀಯರ (ಸೀತಾ, ಶೂರ್ಪನಖಿ ಹಾಗೂ ತ್ರಾಟಿಕಾ) ವಿಷಯದಲ್ಲಿ ರಾಮ ನಡೆದುಕೊಂಡ ರೀತಿ ನಾಚಿಕೆಗೇಡು. ಅಂಥ ರಾಮ ಆದರ್ಶ ಪುರುಷ ಹೇಗಾದಾನು ? ಸ್ತ್ರೀ ವಿಮೋಚನಾವಾದಿಗಳು ರಾಮನನ್ನು ಮೊದಲು ತಿರಸ್ಕರಿಸಬೇಕು.

"ರಾಮಾಯಣದಲ್ಲಿನ ಸಾಂಸ್ಕೃತಿಕ ಸಂಘರ್ಷ" ಎಂಬ ನನ್ನ ಪುಸ್ತಕದ ಮೇಲೆ ಐದು ವರ್ಷಗಳ ಹಿಂದೆ ಜಾತಿವಾದಿ ಹಿಂದೂಗಳು ಮುಂಬಯಿ-ಹೈದರಾಬಾದ್ ಕೋರ್ಟುಗಳಲ್ಲಿ ಕೇಸು ಹಾಕಿದ್ದರು. ಈಗಾಗಲೇ ಈ ಕೇಸುಗಳಲ್ಲಿ ಜಾತಿವಾದಿ ಹಿಂದೂಗಳು ಸೋತು ಹೋಗಿದ್ದಾರೆ.

ಮಹಾರಾಷ್ಟ್ರ ಸರ್ಕಾರ ರಚಿಸಿದ್ದ ಡಾ॥ ಅಂಬೇಡ್ಕರ್ ಸಾಹಿತ್ಯ ಪ್ರಕಟನಾ ಸಮಿತಿ ಸದಸ್ಯ ಸ್ಥಾನಕ್ಕೆ ನಾನು ಈಗಾಗಲೇ ರಾಜೀನಾಮೆ ನೀಡಿದ್ದೇನೆ. ಸರ್ಕಾರದ ಇಬ್ಬಂದಿ ನೀತಿಗೆ ನನ್ನ ಧಿಕ್ಕಾರವಿದೆ.

ವಿರೋಧಿಗಳಿಗೆ ನಾನು ಹೇಳುವುದಿಷ್ಟೇ. 'ಪುಸ್ತಕ ಓದಿ : ಚರ್ಚೆಗೆ ಬನ್ನಿ' ಯಾವುದೇ ದನಿಯನ್ನು ನೀವು ಬಹುಕಾಲ ಹತ್ತಿಕ್ಕಲಾರಿರಿ. ದನಿ ಹತ್ತಿಕ್ಕಬೇಕೆಂದವರ ದನಿಯೇ ಅಡಗಿ ಹೋಗಿರುವುದನ್ನು ಚರಿತ್ರೆ ಹೇಳುತ್ತದೆ.

● **ಅರುಣ ಕಾಂಬಳೆ**
ಖ್ಯಾತ ಚಿಂತಕ ಹಾಗೂ ಭಾರತೀಯ ದಲಿತ ಪ್ಯಾಂಥರ್ಸ್ ನಾಯಕ



ಪಾಠ ಕಲಿಯಲಿ

ಮಹಾರಾಷ್ಟ್ರ ಸರ್ಕಾರ ಒಪ್ಪಿಕೊಂಡಿರುವುದು ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಅಪ್ರಕಟಿತ ಭಾಷಣಗಳು ಮತ್ತು ಬರಹಗಳನ್ನು ಪ್ರಕಟಿಸಲು. ಈ ಭಾಷಣಗಳು ಮತ್ತು ಬರಹಗಳನ್ನು ಪರಿಷ್ಕರಿಸುವ, ತಿದ್ದುವ ಅಥವಾ ಪ್ರಕಟಿಸಿದ್ದನ್ನು ಹಿಂತೆಗೆದುಕೊಳ್ಳುವ ನೈತಿಕ ಹಕ್ಕೇ ಸರ್ಕಾರಕ್ಕಿಲ್ಲ.

ವಿವಾದಾಸ್ಪದ ಭಾಗವು ಡಾ॥ ಅಂಬೇಡ್ಕರ್ ಅವರು ಬರೆದದ್ದೇ ಅಲ್ಲ ಎಂಬ 'ಲೋಕಸತ್ತಾ' ಪತ್ರಿಕೆಯ ಪ್ರಚಾರ ಹೊಣೆಗೇಡಿತನದ್ದು ಹಾಗೂ ಕುಚೋದ್ಯದ್ದು.

ಕಾಂಗ್ರೆಸ್ (ಐ)ನಲ್ಲಿರುವ ದಲಿತ ಶಾಸಕರು ಬಾಯಿ ಹೊಲಿದುಕೊಂಡಂತಿರುವುದು ಕಂಡು ನನಗೆ ಆಶ್ಚರ್ಯವೇನೂ ಆಗಿಲ್ಲ. ಅವರಲ್ಲಿ ಧೈರ್ಯವಿಲ್ಲ ; ಅವರಿಗೆ ನೀತಿಯಿಲ್ಲ ; ಅವರು ಯಾವ ತತ್ವಗಳನ್ನೂ ಇಟ್ಟುಕೊಂಡಿಲ್ಲ. ಭಾರತೀಯ ಜನತಾ ಪಕ್ಷದ ನಿಲವೂ ಅದರ ಮೂಲ ಸ್ವರೂಪಕ್ಕೆ ತಕ್ಕಂತೇ ಇದೆ. ದಲಿತ ಸಂಘಟನೆಗಳ ಸಂಗಡ ಈಗ ನಿಂತಿರುವವರು ಕಮ್ಯೂನಿಸ್ಟರು ಮತ್ತು ಜನತಾ ಪಕ್ಷದಲ್ಲಿನ ಸಮಾಜವಾದಿಗಳು.

ಜಾತಿವಾದಿ ಮರಾಠಾ ಸಂಘದ ಬೆದರಿಕೆ–ಒತ್ತಾಯಗಳಿಗೆ ಮಣಿದು ಮಹಾರಾಷ್ಟ್ರ ಸರ್ಕಾರ ಏನಾದರೂ ಹಿಂದಡಿಯಿಡಲು ಯತ್ನಿಸಿದರೆ ದಲಿತ ಸಂಘಟನೆಗಳು ಪಾಠ ಕಲಿಸಬೇಕಾಗುತ್ತದೆ.

● ಪ್ರಕಾಶ್ ಅಂಬೇಡ್ಕರ್
ಡಾ॥ ಅಂಬೇಡ್ಕರ್ ಮೊಮ್ಮಗ ಹಾಗೂ
ಭಾರತೀಯ ರಿಪಬ್ಲಿಕನ್ ಪಕ್ಷದ ನಾಯಕ.

ಬೌದ್ಧರನ್ನು ಸಹಿಸೆವು


ಭಾರತೀಯ ಬೌದ್ಧರಿಗೆ ಡಾ॥ ಅಂಬೇಡ್ಕರ್ ಬಗ್ಗೆ ಇರುವಂತೆ ಹಿಂದೂಗಳಿಗೆ ರಾಮ–ಕೃಷ್ಣರ ಬಗ್ಗೆ ಶ್ರದ್ಧೆ ಭಕ್ತಿಯಿದೆ. ನಮ್ಮ ಧರ್ಮ ಬಿಟ್ಟು ಹೋದವರು ನಮ್ಮ ಧರ್ಮದ ದೇವರುಗಳ ಟೀಕೆ ಮಾಡುವುದನ್ನು ನಾವು ಹೇಗೆ ಸಹಿಸಲು ಸಾಧ್ಯ ? ಡಾ॥ ಅಂಬೇಡ್ಕರ್ ಅವರು ಹಿಂದು ಆಗಿಯೇ ಉಳಿದು ಈ ಟೀಕೆ ಮಾಡಿದ್ದಾರೆ.

ಸಹಿಸಬಹುದಾಗಿತ್ತೇನೋ. "ಸತಿ" ಬಗ್ಗೆ ರಾಜಾ ರಾಮ ಮೋಹನ್‌ರಾಯ್ ಮಾಡಿದ ಕಟು ಟೀಕೆಯನ್ನು ನಾವು ಸಹಿಸಲಿಲ್ಲವೇ ? ಸರ್ಕಾರ ವಿವಾದಾಸ್ಪದ ಸಂಪುಟವನ್ನು ಹಿಂತೆಗೆದುಕೊಳ್ಳದಿದ್ದರೆ ಶಿವಸೇನೆ ಜತೆಗೆ ಸೇರಿ ನಾವು ಉಗ್ರ ಆಂದೋಲನ ಆರಂಭಿಸುತ್ತೇವೆ.

ದಲಿತರ ಮೇಲೆ ನಮಗೆ ದ್ವೇಷವಿಲ್ಲ. ಆದರೆ ಬೌದ್ಧರೆಂದು ಹೇಳಿಕೊಳ್ಳುವ ದಲಿತರ ಅಹಂಕಾರವನ್ನು ನಾವು ಮುರಿಯಬೇಕಿದೆ. ನವೆಂಬರ್ 23ರಂದು ಮುಂಬಯಿಯಲ್ಲಿ ನಡೆದ ಬೃಹತ್ ದಲಿತ ರ್‍ಯಾಲಿಯಲ್ಲಿ ಹಿಂದೂ ದಲಿತರೇ ಇರಲಿಲ್ಲ.

ಹಿಂದೂಗಳನ್ನು ಒಡೆಯುವ ಕುತಂತ್ರವೊಂದು ನಡೆಯುತ್ತಿದೆ. ಸರ್ಕಾರವೂ ಈ ಕುತಂತ್ರದಲ್ಲಿ ಪಾಪಿಯಾಗಲು ನಾವು ಬಿಡೆವು. ಮೀಸಲಾತಿ, ಮಂಡಲ್ ವರದಿ ಶಿಫಾರಸು ಇತ್ಯಾದಿ ಯಾವುದೇ ಭೇದಭಾವ ನೀತಿಗೆ ನಾವು ವಿರೋಧಿಗಳು.

● ಶಶಿಕಾಂತ ಪವಾರ್
ಮರಾಠಾ ಮಹಾ ಸಂಘದ
ಅಧ್ಯಕ್ಷ





ಇಬ್ಬಂದಿ ಚಿಂತನೆ

ಡಾ॥ ಅಂಬೇಡ್ಕರ್ ಅವರ ಪುಸ್ತಕದ ಬಗ್ಗೆ ಕಾಂಗ್ರೆಸ್ ಸರ್ಕಾರ ತಾಳಿರುವ ಧೋರಣೆ ಜಾತಿ ಕೋಮುವಾದಿ ಶಕ್ತಿಗಳ ಮುಂದೆ ವಿಧೇಯವಾಗಿ ನಿಲ್ಲುವ ಕಾಂಗ್ರೆಸ್ ನೀತಿಗೆ ತಕ್ಕುದೇ ಆಗಿದೆ. ಮರಾಠಾವಾಡಾ ವಿಶ್ವವಿದ್ಯಾಲಯಕ್ಕೆ ಡಾ॥ ಅಂಬೇಡ್ಕರ್ ಹೆಸರು ಇಡುವುದು, ಮುಸ್ಲಿಂ ಮಹಿಳಾ ಮಸೂದೆ ಹಾಗೂ "ಸತಿ" ಬಗ್ಗೆ ಇತ್ತೀಚಿನ ನಿಲವು ನೋಡಿದರೆ ಕಾಂಗ್ರೆಸ್ ಸದಾ ಜಾತಿ-ಕೋಮುವಾದಿ ಶಕ್ತಿಗಳಿಗೆ ಅನುವು ಒದಗಿಸಿದೆ ಎಂದೇ ಗೊತ್ತಾಗುತ್ತದೆ. ನೆಹರೂ ಪ್ರತಿಪಾದಿಸಿದ್ದ ಜಾತ್ಯಾತೀತವಾದದ ಮೂಲಬೇರೇ ಈ ಬಗೆಯ ಇಬ್ಬಂದಿ ಚಿಂತನೆಯಲ್ಲವೇ ?

ಸೇಠ್-ಸಾವ್ಕಾರ್–ಬ್ರಾಹ್ಮಣರ ಕೂಟ ರೂಪಿಸಿದ್ದ ಸಂಸ್ಕೃತಿಯನ್ನು ಬಯಲಿಗೆಳೆದ ಮಹಾತ್ಮಾ ಜ್ಯೋತಿ ಬಾಫುಲೆ ಅವರ ಮಾರ್ಗದಲ್ಲೇ ಅಂಬೇಡ್ಕರ್ ಮುಂದುವರೆದು ಹಿಂದೂ ಧರ್ಮದಲ್ಲಿನ ಹೀನ ಚಿಂತನೆಯನ್ನು ಬಹಿರಂಗ ಗೊಳಿಸಿದ್ದಾರೆ. ಮಾರ್ಕ್ಸ್‌ವಾದಿ ಚಿಂತಕ ಡಿ.ಡಿ. ಕೋಸಂಬಿ ಅಂಥವರೂ ಇಂಥ ಕಾರ್ಯವನ್ನೇ ಮುಂದುವರೆಸಿದ್ದಾರೆ.

ಅಂಬೇಡ್ಕರ್, ಫುಲೆ, ಅಗರ್‌ಕರ್, ಲೋಕಹಿತವಾದಿ ಆಂದೋಲನವೂ ಸೇರಿದಂತೆ ಅಂಥ ಎಲ್ಲ ಚಳವಳಿಗಳನ್ನು ಬೆಂಬಲಿಸ ಬೇಕಾದುದು ಪ್ರಜಾಸತ್ತಾತ್ಮಕ ಮತ್ತು ಎಡಪಂಥೀಯ ಶಕ್ತಿಗಳ ಪ್ರಮುಖ ಕರ್ತವ್ಯ.

● ಕುಮಾರ್ ಶಿರಾಳ್ಕರ್
ಸಿ.ಪಿ.ಎಂ. ರಾಜ್ಯಮಂಡಲಿ ಸದಸ್ಯ


ಸ್ತ್ರೀಗೆ ಅಪಚಾರ

'ಹಿಂದೂ ಧರ್ಮ ತ್ಯಜಿಸಿ ಹೋದ ಡಾ॥ ಅಂಬೇಡ್ಕರ್ ಅವರಿಗೆ ಹಿಂದೂ ಧರ್ಮವನ್ನು ಟೀಕಿಸುವ ನೈತಿಕ ಹಕ್ಕೇ ಇಲ್ಲ' ಎಂಬುದು ಮೂರ್ಖವಾದ ಅಪ್ಪೇ. ಈಗ ವಿವಾದಕ್ಕೆಡೆ ಮಾಡಿಕೊಟ್ಟಿರುವ ಪುಸ್ತಕವನ್ನು ಬರೆದ ದಿನಗಳಲ್ಲಿ ಅವರು ಇನ್ನೂ ಹಿಂದೂ ಧರ್ಮದಲ್ಲೇ ಉಳಿದಿದ್ದರು. ಹಿಂದೂ ಮನಸನ್ನು ಪರಿವರ್ತಿಸುವಲ್ಲಿ ವಿಫಲರಾದ ನಂತರವೇ ಅವರು ಧರ್ಮ ತ್ಯಜಿಸಲು ನಿರ್ಧರಿಸಿದ್ದು.

ಅಂಬೇಡ್ಕರ್ ಅವರ ಪುಸ್ತಕದಿಂದ ಯಾರ ಮನಸಿಗೆ ನೋವು ಉಂಟಾಗಿದೆ ? ಮಹಿಳಾ ವಿಮೋಚನೆಯಲ್ಲಿ ನಂಬಿಕೆಯಿದ್ದ ಹಿಂದೂ ಸ್ತ್ರೀ ನಾನು. ರಾಮ ಆದರ್ಶ ಪುರುಷ ಎನ್ನುವುದೇ ಹಿಂದೂ ಸ್ತ್ರೀಯರಿಗೆ ಅಪಚಾರ ಎಸಗಿದಂತೆ.

ಪುಸ್ತಕವನ್ನು ಹಿಂತೆಗೆದು ಕೊಳ್ಳಬೇಕೆಂದು ಒತ್ತಾಯಪಡಿಸುವುದು ಸರಿಯಲ್ಲ. ಡಾ॥ ಅಂಬೇಡ್ಕರ್ ಉದ್ದೇಶ ಯಾರನ್ನೇ ಆಗಲಿ ನೋಯಿಸುವುದಲ್ಲ ; ಸಾಮಾಜಿಕ ಮೌಲ್ಯಗಳನ್ನು ಎತ್ತಿ ಹಿಡಿಯುವುದು. ವಾಕ್ ಮತ್ತು ಪ್ರಕಟನಾ ಸ್ವಾತಂತ್ರ್ಯವನ್ನು. ಅವರು ಬಳಸಿರುವುದೂ ಈ ಆಶಯದಿಂದಲೇ.

ಖ್ಯಾತ ಲೇಖಕಿ **● ನಲಿನಿ ಪಂಡಿತ್**



ಅಂಗವಿಕಲ ಮಗುವಿಗೆ ವಿಶೇಷ ಆರೈಕೆ ಅಗತ್ಯ

ನಿಮ್ಮ ಮಗು ಅಂಗವಿಕಲವಾಗಿದ್ದರೆ ನಿರಾಶರಾಗದಿರಿ.

ನಿಮ್ಮ ಮಗುವಿಗೆ ಸಾಧ್ಯವಿರುವ ಎಲ್ಲಾ ಕಾರ್ಯಗಳ ಬಗ್ಗೆ ಚಿಂತಿಸಿರಿ.

ಅಂಗವಿಕಲ ಮಗು ನಿಮ್ಮ ಪ್ರೋತ್ಸಾಹದಿಂದ ಹೆಚ್ಚು ಕಡಿಮೆ ಸ್ವಾಭಾವಿಕ ಜೀವನ ನಡೆಸಲು ಮತ್ತು ಅಂಗವಿಕಲರಿಗೆ ಹೊಂದಿಕೊಳ್ಳಲು ಸಾಧ್ಯವಿದೆ.

ಮನೋದೌರ್ಬಲ್ಯದ ಮಗುವಿನೊಂದಿಗೆ ತಾಳ್ಮೆಯಿಂದ ವರ್ತಿಸಿ. ಆ ಮಗು ತನ್ನ ಮನೋವಿಕಲತೆಯ ಜೀವನಕ್ಕೆ ಹೊಂದಿಕೊಳ್ಳಲು ಸಹಕರಿಸಿ.

ನೆನಪಿಡಿ: ಅಂಗವಿಕಲತೆ ಮಗುವಿನ ತಪ್ಪಲ್ಲ ಏನಾದರೂ ಅದು ನಿಮ್ಮ ಮಗು ಅಲ್ಲವೇ?

ನೆನಪಿಡಿ: ಪ್ರತಿಯೊಂದು ಮಗುವಿನಲ್ಲೂ ವಿಶೇಷ ಚೈತನ್ಯವಿದೆ. ಅದಕ್ಕೆ ನಿಮ್ಮ ಪ್ರೀತಿಯ ಅಗತ್ಯವಿದೆ.

ಹೆಚ್ಚಿನ ವಿವರಗಳಿಗೆ

ನಿರ್ದೇಶಕರು
ಸಮಾಜ ಕಲ್ಯಾಣ ಇಲಾಖೆ
ಕರ್ನಾಟಕ ಸರ್ಕಾರ
ಬೆಂಗಳೂರು-ಇವರನ್ನು ಸಂಪರ್ಕಿಸಿರಿ

ಕರ್ನಾಟಕ ವಾರ್ತೆ

⇨7

ಬೇಡಿ ಎಂದು ಅಸ್ಪೃಶ್ಯರು ಮತ್ತು ಅವರ ಕೈವಾರಿಗಳಿಗೆ ಉಪದೇಶ ಮಾಡುವ ಈ ಢೋಂಗೀ ಜನರಿಗೆ ನಾವು ಕೇಳುವದೇನೆಂದರೆ, ನಿಮ್ಮ ಹದಿನೆಂಟು ಕೋಟಿ ಜನರಿಗೆ ಮಾತ್ರ ಮನೋವೃತ್ತಿಗಳಿವೆ ಮತ್ತು ಏಳು ಕೋಟಿ ಅಸ್ಪೃಶ್ಯರಿಗೆ ಮನೋವೃತ್ತಿಗಳಿಲ್ಲವೇ? ಮೊದಲು ಜನರ ಮೇಲೆ ಅತ್ಯಾಚಾರವೆಸಗಿ ಅವರ ಇಹಲೋಕವನ್ನು ನರಕ ಸದೃಶವನ್ನಾಗಿ ಮಾಡುವದು, ಅನಂತರ ಅವರನ್ನು ಆ ರೀತಿ ನಡೆಸಿಕೊಳ್ಳುವದು ತಮ್ಮ ಹಕ್ಕು ಎಂದು ಹೇಳಿ ಆ ಹಕ್ಕುಗಳಿಗೆ ಧಕ್ಕೆ ತಟ್ಟುವ ಸಂಭವ ಕಂಡೊಡನೆ ತಮ್ಮ ಮನೋವೃತ್ತಿಗಳನ್ನು ನೋಯಿಸಲಾಯಿತು ಎಂದು ಬೊಬ್ಬೆ ಹಾಕುವದು! ನೀವು ಬ್ರಿಟೀಷರ ಮನೋವೃತ್ತಿಗಳಿಗೆ ಏಕೆ ಧಕ್ಕೆ ತಟ್ಟಿಸುತ್ತಿದ್ದೀರಿ ಭಾರತೀಯರು ಪರಾಜಿತರು. ಅದ್ದರಿಂದ ಪಾರತಂತ್ರ್ಯದಲ್ಲಿ ಇರುವದಕ್ಕೆ ಯೋಗ್ಯರು ಎಂಬುದು ಬ್ರಿಟೀಷರ ಭಾವನೆ. ಹೀಗಾಗಿ ಭಾರತೀಯರು ದೊಡ್ಡ-ದೊಡ್ಡ ಅಧಿಕಾರದ ಸ್ಥಾನಗಳನ್ನು ಪಡೆದು ಬ್ರಿಟೀಷರ ಸರಿಸಮನಾಗಿ ನಡೆದುಕೊಳ್ಳುವ ಪ್ರಯತ್ನ ಮಾಡುವದರಿಂದ ಬ್ರಿಟೀಷರ ಮನೋವೃತ್ತಿಗಳಿಗೆ ನೋವುಂಟಾಗುವದು ಸ್ವಾಭಾವಿಕವಲ್ಲವೇ? ಜನರ ಮನೋವೃತ್ತಿಯನ್ನು ನೋಯಿಸಬೇಡಿ ಎಂದು ಪರೋಪದೇಶ ಪಾಂಡಿತ್ಯ ತೋರಿಸುವ ಈ 'ದೇಶಭಕ್ತರ' ಜನರಿಗೆ 'ನಿಮ್ಮ ಭಾವನೆಗಳು ತಪ್ಪಾಗಿವೆ. ಮನುಷ್ಯತ್ವದ ಹಕ್ಕುಗಳು ಎಲ್ಲರಿಗೂ ಸಿಗಲೇಬೇಕು. ಈವರೆಗೆ ಅನ್ಯಾಯ ನಡೆದಿದೆ. ಆದರೆ ಪರಂಪರೆಯ ಹೆಸರಿನಲ್ಲಿ ಅದಕ್ಕೆ ನ್ಯಾಯದ ಸ್ವರೂಪ ಪ್ರಾಪ್ತವಾಗುವುದಿಲ್ಲ. ಎಂದು ಸ್ಪಷ್ಟವಾಗಿ ಹೇಳಿ ಅವರ ಕಿವಿ ತೆರೆಸುವದು ಬೇಡವೇ. ಆದರೆ ಹಾಗೆ ಕಿವಿ ತೆರೆಸಿದರೆ ಅಗ್ಗದ ಲೋಕಪ್ರಿಯತೆ ಹೇಗೆ ಸಿಕ್ಕಿತು? ಜಾತಿ ವರ್ಚಸ್ಸನ್ನು ಮರೆಯುವ ಆಶೆ ಹೇಗೆ ಪೂರೈಸಿತು? ಅಜ್ಞ ಜನರಿಗೆ ಯೋಗ್ಯ ಶಿಕ್ಷಣ ಕೊಡದೆ ಅವರ ಹೆಸರನ್ನೇ ಮುಂದೆ ಮಾಡಿ ತಾವೇ ನ್ಯಾಯಪೂರ್ಣ ಮತ್ತು ಯೋಗ್ಯವಾದ ಚಳವಳಿಗೆ ವಿರೋಧ ಮಾಡುವದು ಮಹಾರಾಷ್ಟ್ರದಲ್ಲಿನ ಕಳೆದ ನಾಲ್ವತ್ತು ವರ್ಷಗಳ ಪರಂಪರೆಯೇ ಆಗಿದೆ. ಭಾಲಾಕಾರರು ಇದೇ ಗರಡಿಯಲ್ಲಿ ತಯಾರಾದವರು. ಆದರೆ ಈ ಕಣ್ಣು ಮುಚ್ಚಾಲೆ ಇನ್ನು ಮುಂದೆ ನಡೆಯಲಾರದೆಂಬುದನ್ನು ಅವರು ಮತ್ತು ಅವರ ಸಂಪ್ರದಾಯ ಬಂಧುಗಳು ಚೆನ್ನಾಗಿ ಅರಿತುಕೊಳ್ಳಲಿ. ಸತ್ಯವನ್ನು ತಿಳಿಯಬಯಸುವ ಬಹಿಷ್ಕೃತರು 'ತಂದೆಯನ್ನು ತೋರಿಸಿ ಇಲ್ಲವಾದರೆ ಶ್ರಾದ್ಧ ಮಾಡಿ' ಎಂದು ಸವಾಲು ಹಾಕುತ್ತಿದ್ದಾರೆ. ಅಜ್ಞಾನಿಗಳಾದ ಜನರ ಮನೋಭಾವನೆಗಳನ್ನು ನೋಯಿಸಬಾರದೆಂದು ನಿಮಗನಿಸುತ್ತಿದ್ದರೆ. ಅಂತಹ ಭಾವನೆಗಳೇ ತಪ್ಪು ಎಂಬುದನ್ನು ನೀವು ಅವರಿಗೆ ಮನಗಾಣಿಸಿ ಕೊಡಿ. ಅದು ನಿಮ್ಮ ಕರ್ತವ್ಯ. ಆದರೆ ಹಾಗೆ ಮಾಡದೇ, ನೀವೇ ತಿರುಗಿ ಅವರಿಗೆ ಚಿತಾವಣೆ ಮಾಡುತ್ತಿರುವದರಿಂದ, ನಿಜವಾದ ಅರ್ಥದಲ್ಲಿ ನೀವೇ ಅಪರಾಧಿಗಳು. ನೀವು ಅಜ್ಞ ಜನರ ಹಿಂದೆ ಅಡಗಿಕೊಳ್ಳ ಬಯಸುತ್ತೀರಿ. ಆದರೆ ನಾವು ನಿಮ್ಮನ್ನು ಎಳೆದು ಹೊರತಂದ ಹೊರತು ಬಿಡುವವರಲ್ಲ.

ಭಾಲಾಕಾರರು ಮಹಾಡ ಪ್ರಕರಣದ ಬಗ್ಗೆ ಬರೆಯುವಾಗ ದೇವಸ್ಥಾನದ ವಿಷಯದಲ್ಲಿ ಯಾವುದೋ ಪುರಾಣ ಹೇಳಿದ್ದಾರೆ. ಆದರೆ ಮೊದಲನೆಯ ಮಾತೆಂದರೆ ಮಹಾಡ ಪರಿಷತ್ತಿನಲ್ಲಿ ಸೇರಿದ ಹೊಲೆಯ ಸಮಗಾರರು ಅಲ್ಲಿಯ ಯಾವ ಗುಡಿಯಲ್ಲೂ ಪ್ರವೇಶ ಮಾಡ ಬಯಸಿರಲಿಲ್ಲ. ಎಲ್ಲ ಊರುಗಳಲ್ಲಿ ಅಸ್ಪೃಶ್ಯರು ಅಪರಿಮಿತ ಕಷ್ಟಗಳನ್ನು ಅನುಭವಿಸಬೇಕಾಗುತ್ತದೆ. ಅದ್ದರಿಂದ ಸಾರ್ವಜನಿಕ ನೀರಿನ ತಾಣಗಳು ಮುಕ್ತವಾಗಿರಬೇಕೆಂದು ಅವರ ಬೇಡಿಕೆಯಾಗಿತ್ತು. 1924ರಲ್ಲಿ ಮಹಾಡ ಮುನಿಸಿಪಾಲಿಟಿ ಸಾರ್ವಜನಿಕ ಉಪಯೋಗಕ್ಕೆಂದು ಠರಾಯಿಸಿದ ಕೆರೆಗಳ ಬಳಕೆಯನ್ನು ಪರಿಷತ್ತಿನ ಮೂಲಕ ಕ್ರಮಬದ್ಧಗೊಳಿಸುವದು ಅವರ ಮನಿಷೆಯಾಗಿತ್ತು. ಆ ಪ್ರಕಾರ ಎಲ್ಲ ಪ್ರತಿನಿಧಿಗಳು ರಾಜಾರೋಷಾಗಿ ಕೆರೆಗೆ ಹೋದರು ಮತ್ತು ಅಲ್ಲಿಯ ನೀರು ಕುಡಿದು ಬಂದರು. ಆದರೆ ಹೊಲೆಯ ಸಮಗಾರರನ್ನು ನೀರಡಿಕೆಯಿಂದಲೇ ಸಾಯಿಸ ಬಯಸಿದ್ದ ಜನರಿಗೆ ಅದು ಸರಿ ಬರಲಿಲ್ಲ. ಅವರು ಇದರ ಸೇಡು ತೀರಿಸಿಕೊಳ್ಳುವ ಅಧಮ ಇಚ್ಛೆಯಿಂದ 'ಹೊಲೆಯ ಸಮಗಾರರು ಈಗ ವೀರೇಶ್ವರನ ಗುಡಿಯಲ್ಲಿ ಪ್ರವೇಶ ಮಾಡುವವರಿದ್ದಾರೆ' ಎಂಬ ಸುಳ್ಳು ಹುಯಿಲೆಬ್ಬಿಸಿ ಅಜ್ಞ ಜನರಿಗೆ ಚಿತಾವಣೆ ನೀಡಿದರು. ಅರ್ಥಾತ್, ಮಹಾಡ ಪ್ರಕರಣದಲ್ಲಂತೂ ಮಂದಿರ ಪ್ರವೇಶದ ಪ್ರಶ್ನೆಯ ಸಂಬಂಧವೇ ಇಲ್ಲ. ಆದರೂ ಮಂದಿರದ ಸಂಬಂಧವನ್ನು ಭಾಲಾಕಾರರು ಎಳೆದೆಳೆದು ತಂದೇ ಬಿಟ್ಟಿದ್ದಾರೆ ಮತ್ತು ಈ ಸಂಧಿಯನ್ನು ಉಪಯೋಗಿಸಿಕೊಂಡು ಅಸ್ಪೃಶ್ಯರಿಗೆ ಒಂದು ಸಣ್ಣ ಭಾಷಣವನ್ನೇ ಬಿಗಿದಿದ್ದಾರೆ. ಎಂದ ಮೇಲೆ ನಾವು ಸ್ಪಷ್ಟವಾಗಿ ಹೇಳುವದೇನೆಂದರೆ, ಎಲ್ಲಿಯವರೆಗೆ ನಾವು ನಮ್ಮನ್ನು ಹಿಂದುಗಳೆಂದು ಹೇಳಿಕೊಳ್ಳುತ್ತೇವೆಯೋ ಮತ್ತು ನೀವು ನಮ್ಮನ್ನು ಹಿಂದುಗಳೆಂದು ತಿಳಿಯುತ್ತೀರೋ, ಅಲ್ಲಿಯವರೆಗೆ ಗುಡಿಗೆ ಹೋಗಿ ದೇವರ ದರ್ಶನ ಪಡೆಯುವದನ್ನು ನಾವು ನಮ್ಮ ಹಕ್ಕು ಎಂದು ತಿಳಿಯುತ್ತೇವೆ. ನಮಗೆ ಪ್ರತ್ಯೇಕ ಗುಡಿಗಳು ಬೇಡವೇ ಬೇಡ. ಗುಡಿಗಳಿಲ್ಲದೇ ನಮ್ಮದೇನೂ ನಿಂತಿಲ್ಲ. ದೇವ ಭಕ್ತಿ ಮಾಡಲೇಬೇಕೆಂದಿರುವವರಿಗೆ ಗುಡಿಗಳೇ ಬೇಕೆಂದೇನೂ ಇಲ್ಲ. ಸಾಮಾಜಿಕ ಉಪಾಸನೆ ಮತ್ತು ಸಾಮಾಜಿಕ ಸಮ್ಮೇಲನ ಅಥವಾ ಐಕ್ಯಕ್ಕಾಗಿ ಮಂದಿರಗಳು ಬೇಕಾಗುತ್ತವೆ. ಸ್ವತಂತ್ರ ದೇವಾಲಯಗಳನ್ನು ಕಟ್ಟುವದಿದ್ದರೆ ಅಸ್ಪೃಶ್ಯರು ಸ್ವತಃ ಕಟ್ಟಿಕೊಂಡಾರು, ಅದಕ್ಕೆ ಇತರರ ಪರವಾನಿಗೆ ಬೇಕಿಲ್ಲ. ಹೇಗಿದ್ದರೂ ಇಂದಲ್ಲ ನಾಳೆ ನಾವು ಈ ಸಮಸ್ಯೆಯ ನಿರ್ಣಯವನ್ನು ಮಾಡುವವರೇ ಇದ್ದೇವೆ. ನಮಗೆ ಸಮಾಜದಲ್ಲಿ ಸಮಾನ ಹಕ್ಕುಗಳು ಬೇಕಾಗಿವೆ. ಅದನ್ನು ನಾವು ಶಕ್ತಿ ಇದ್ದಷ್ಟು ಹಿಂದೂ ಸಮಾಜದಲ್ಲಿಯೇ ಇದ್ದುಕೊಂಡು ಮತ್ತು ಅಶಕ್ಯವೆನಿಸಿದರೆ ಕೌಡಿ ಬೆಲೆಯದೆನಿಸಿದ ಹಿಂದುತ್ವಕ್ಕೆ ಲತ್ತೆ ಏಟು ಕೊಟ್ಟು ಪಡೆದುಕೊಳ್ಳುತ್ತೇವೆ. ಒಂದೊಮ್ಮೆ ಹಿಂದುತ್ವಕ್ಕೆ ಎಳ್ಳುನೀರು ಬಿಡುವ ಸಂದರ್ಭ ಒದಗಿದರೆ ನಾವು ಗುಡಿಗಳ ಸುದ್ದಿಗೇ ಹೋಗುವುದಿಲ್ಲವೆಂಬುದನ್ನು ಹೇಳುವದೇ ಬೇಡ.

ಭಾಲಾಕಾರರು ನಮ್ಮ ವರ್ಗಕ್ಕೆ ಬೆದರಿಕೆ ಹಾಕಲೂ ಕೂಡ ಹಿಂದೆ-ಮುಂದೆ ನೋಡಿಲ್ಲ. 'ಪಠಾಣಗಿರಿ' ತೋರಿಸುವ ಇಚ್ಛೆ ನಮಗಿಲ್ಲ. ನಮಗೆ ಗುಂಡಾಗಿರಿ ಮಾಡುವ ವಿಚಾರವಿಲ್ಲ. ಆದರೆ ನಮ್ಮ ಮೇಲೆ ಎಷ್ಟೋ ಶತಮಾನಗಳಿಂದ ನಡೆಯುತ್ತ ಬಂದಿರುವ ಗುಂಡಾಗಿರಿಯನ್ನು ಇನ್ನು ಮುಂದೆ ನಾವು ನಡೆಯಗೊಡಿಸುವದಿಲ್ಲ. ಪಠಾಣರನ್ನು ನೋಡಿ ಭಾಲಾಕಾರರ ಜಾತಿ-ಬಾಂಧವರು ಮತ್ತು ಕ್ಷತ್ರಿಯ ಬಚ್ಚಾಗಳೆಂದೆನಿಸಿಕೊಳ್ಳುವವರು ಹೇಗೆ ಗಲಿತವಸ್ತ್ರರಾಗುತ್ತಾರೆಂಬುದು ನಮಗೆ ಗೊತ್ತಿವೆ. ಪಠಾಣಗಿರಿಯನ್ನು ತೋರಿಸುವದೇ ಆಗಿದ್ದರೆ ಬಹಿಷ್ಕೃತ ವರ್ಗ ಅದನ್ನು ಎಂದೋ ತೋರಿಸಿ ಬಿಟ್ಟಿರುತ್ತಿತ್ತು. ದೇವಸ್ಥಾನವನ್ನು ಪ್ರವೇಶಿಸುವ ಅವಿಚಾರ ಮಾಡಿದರೆ, 'ಅಸ್ಪೃಶ್ಯರ ಬೆನ್ನೆಲವು ಪುಡಿ-ಪುಡಿಯಾಗುವ ಸಂಭವವಿದೆ' ಎಂದು ಭಾಲಾ ಭೋಪಟಕರ ಹೇಳುತ್ತಾರೆ. ಆದರೆ ಮಹಾಡದಲ್ಲಿಯ ಅಸ್ಪೃಶ್ಯ ವರ್ಗದ ಮುಂದಾಳುಗಳು ಮತ್ತು ಕೈವಾರಿಗಳು ಪರಿಷತ್ತಿನ ಪ್ರತಿನಿಧಿಗಳನ್ನು ಹಿಡಿತದಲ್ಲಿಟ್ಟಿರದಿದ್ದರೆ, ಮೂರುವರೆ ಸಾವಿರ ಪ್ರತಿನಿಧಿಗಳು ಮಹಾಡ ಊರಿನಲ್ಲಿ ಅನರ್ಥವನ್ನೇ ಮಾಡುತ್ತಿದ್ದರು ಮತ್ತು ನಿಜವಾಗಿಯೂ ಪಠಾಣಗಿರಿಯ ರುಚಿ ಅಲ್ಲಿಯ ಹಿಂದೂ ಗೂಂಡಾಗಳಿಗೆ ಸವಿಯಲು ದೊರಕುತ್ತಿತ್ತು. ಅಸ್ಪೃಶ್ಯರ ಬೆನ್ನೆಲವು ಪುಡಿಪುಡಿಯಾಗುವ ಬದಲು ಸ್ಪೃಶ್ಯ ವರ್ಗದ ಜನರ ತಲೆಗಳು ನುಚ್ಚು ನೂರಾಗುತ್ತಿದ್ದವು ಮತ್ತು ಅಸ್ಪೃಶ್ಯರ ವಿರುದ್ಧ ಅಜ್ಞ ಜನರನ್ನು ಚಿತಾವಣೆ ಮಾಡುವ ಲಂಬೋದರ ಪುಢಾರಿಗಳ ಹೊಟ್ಟೆ ಸೀಳಾಗುತ್ತಿದ್ದವು ಎನ್ನುವದನ್ನು ಭೋಪಟಕರರು ಹಾಗೂ ಅವರಂತೆಯೇ ಬೊಗಳುವ ಇತರರು ಅವಶ್ಯವಾಗಿ ಲಕ್ಷ್ಯದಲ್ಲಿಟ್ಟಿರಬೇಕು. ಪ್ರಸಂಗ ಬಂದರೆ, ಬಂಗಾಲದಲ್ಲಿಯ ನಾಮಶೂದ್ರರು ಮುಸಲ್ಮಾನ ಸಹಾಯದಿಂದ ಮಡಿಪಂತ ಹಿಂದುಗಳ ಸೊಕ್ಕು ಮುರಿದ ಹಾಗೆ ಕೂಡ ಆಗಬಹುದು. ಬೆನ್ನೆಲವು ಪುಡಿ ಪುಡಿ ಮಾಡುವ ಬೊಗಳುವಿಕೆಯನ್ನು ಭಾಲಾಕಾರರು ಮನೆಯಲ್ಲಿ ಕುಳಿತು ಮಾಡಲಿ. ಭಿಕ್ಷುಕರ ಸಭೆಯಲ್ಲಿ ಕಡಗ ತಿರುಗಿಸುತ್ತ ಕೈಸನ್ನೆ ಮಾಡಿ 'ವಾಚಿ ವೀರ್ಯ ದ್ವಿಜಾನಾಮ್' ಎಂಬ ಹೇಳಿಕೆಯ ಸತ್ಯವನ್ನು ಮನಗಾಣಿಸಿ ಕೊಡಲಿ; ಆದರೆ ಬಹಿಷ್ಕೃತ ವರ್ಗದ ಬಗ್ಗೆ ಬರೆಯುವಾಗ ಮಾತ್ರ ಇನ್ನು ಮುಂದೆ ವಿಚಾರ ಮಾಡಿ ಬರೆಯಬೇಕು. ಇಂತಹ ವಿದೂಷಕರ ಅಥವಾ ಢೋಂಗೀ ದೇಶಭಕ್ತರ ಸಹಾನುಭೂತಿಯ ಅವಶ್ಯಕತೆ ನಮಗೆ ಸುತರಾಂ ಇಲ್ಲ. ಅವರಿಗೆ ನಾವು ಎಚ್ಚರಿಕೆ ನೀಡಿ ಹೇಳುವದೇನೆಂದರೆ, ನಿಮ್ಮ ಮೇಲೆ ನಮಗೆ ಎಳ್ಳಷ್ಟೂ ವಿಶ್ವಾಸವಿಲ್ಲ. ನಿಮ್ಮ ಉಪದೇಶಕ್ಕೆ ನಾವು ಹುಲ್ಲುಕಡ್ಡಿಯಷ್ಟೂ ಬೆಲೆ ಕೊಡುವದಿಲ್ಲ. ನಿಮಗೆ ನಮ್ಮ ಹಕ್ಕುಗಳನ್ನು ಪುರಸ್ಕರಿಸುವ ಇಚ್ಛೆ ಇಲ್ಲದಿದ್ದರೆ ನಮ್ಮ ಗೊಡವೆಗೆ ಬರಬೇಡಿ. ಆದರೆ ನಮ್ಮ ಮಾರ್ಗದಲ್ಲಿ ಅಡ್ಡ ಬಂದರೆ ಮತ್ತು ಅಜ್ಞ ಜನರಿಗೆ ಚಿತಾವಣೆ ಮಾಡತೊಡಗಿದರೆ ನಾವು ಹಿಂದೆ ಮುಂದೆ ನೋಡುವದಿಲ್ಲ. ನಮ್ಮ ಪಕ್ಷ ನ್ಯಾಯದ ಪಕ್ಷ ಮತ್ತು ಅದಕ್ಕಾಗಿ ನಾವು ಕೊನೆಯವರೆಗೆ ಬಡಿದಾಡುವೆವು. ಬಹಿಷ್ಕೃತ ವರ್ಗವೆಂದರೆ ಶಗಣಿ-ಮೇಣದ ಗೊಂಬೆಯೇನಲ್ಲ. ಅದು ಇಂದಿನವರೆಗೆ ರಣಾಂಗಣದಲ್ಲಿ ವೀರತ್ವವನ್ನು ಮೆರೆದಿದೆ. ಭಾಲಾಕಾರರಂತಹ ಬೆದರಿಕೆಹಾಕುವ ಜನರು ಮುಸಲ್ಮಾನರು ಅಥವಾ ಯುರೋಪಿಯನ್ನರ ಎದುರು ಹೇಗೆ ದಿಗಿಲುಗೊಳ್ಳುತ್ತಾರೆಂಬುದು ನಮಗೆ ಗೊತ್ತಿದೆ ಮತ್ತು ಪ್ರಸಂಗ ಬಂದರೆ, ನಮ್ಮ ಬೆನ್ನೆಲಬು ಪುಡಿ ಮಾಡುವ ಹೆದರಿಕೆ ತೋರಿಸುವ ಜನರ ತಲೆ ಬಿಸಿ ಮಾಡಲು ನಾವು ಹಿಂಜರಿಯಲಾರೆವು. ಆಮೇಲೆ ಏನಾಗುವದಿದೆಯೋ ಅದು ಆಗಲಿ.

ಇಂದು ನೆಡುವ ಒಂದು ಸಸಿ – ನಾಳಿನ ಬಾಳಿನ ಆಧಾರ

ಇಂದೇ ಒಂದು ಸಸಿ ನೆಡಿರಿ. ಉಚಿತ ಸಸಿಗಳು ನಿಮಗಾಗಿ ಕಾದಿವೆ.

ನೀವೊಂದು ಸಸಿ ನೆಟ್ಟರೆ, ಆ ಸಸಿಯಿಂದ ನೀವು ಪಡೆಯುವ ಪ್ರಯೋಜನ ಒಂದೆರಡಲ್ಲ. ಪ್ರಯೋಜನ ನಿಮ್ಮೊಬ್ಬರಿಗೆ ಅಲ್ಲ— ನಿಮ್ಮ ಮನೆಯವರಿಗೆ, ಸುತ್ತಮುತ್ತಲ ಜನರಿಗೆ, ಎಲ್ಲರಿಗೂ.

ನಮ್ಮ ಪೂರ್ವಜರಿಗೆ ಮರಗಳ ಮಹತ್ವ ತಿಳಿದಿತ್ತು. ಆದ್ದರಿಂದಲೇ ಆ ಕಾಲದಲ್ಲಿ ಪ್ರತಿಯೊಂದು ಹಳ್ಳಿಯಲ್ಲಿಯೂ ಮರಗಳ ಒಂದು ತೋಪು ಇರುತ್ತಿತ್ತು. ಪಟ್ಟಣಗಳಲ್ಲಿ ಪ್ರತಿಯೊಂದ ಮನೆಗೂ ಒಂದೆರಡು ಮರಗಳು ತಂಪಿನ ಆಸರೆ ನೀಡುತ್ತಿದ್ದವು.

ಆದರೆ ಇಂದು ನಮ್ಮ ಅರಣ್ಯ ಸಂಪತ್ತು ಕ್ಷೀಣಿಸಿದೆ. ಉರುವಲಿಗಾಗಿ, ಮರಮುಟ್ಟುಗಳಿಗಾಗಿ ಜಾನುವಾರುಗಳ ಮೇವಿಗಾಗಿ ಕಾಡನ್ನು ಕಡಿದು ನಾಶಪಡಿಸಲಾಗಿದೆ. ಅಕ್ರಮವಾಗಿ ಮರ ಕಡಿಯುವುದರಿಂದಷ್ಟೆ ಅಲ್ಲ, ಕಾಳ್ಗಿಚ್ಚಿನಿಂದಲೂ ಮರಗಳು ನಾಶವಾಗುತ್ತಿವೆ— ಇದರ ಪರಿಣಾಮ ನಮ್ಮ ಭವಿಷ್ಯಕ್ಕೆ ಮಾರಕ. ನಮ್ಮ ಅಮೂಲ್ಯವಾದ ಕಾಡುಗಳು ಕಣ್ಮರೆಯಾದರೆ ನಮಗೆ ಕ್ಷಾಮ, ನೆರೆ ಹಾವಳಿ, ಅಷ್ಟೇಕೆ ಪರಿಸರದ ಅವನತಿ — ಎಲ್ಲವೂ ನಿಶ್ಚಿತ.

ಆದರೆ ಒಂದು ಆಶಾಕಿರಣವಿದೆ. ನಾವು ಪ್ರಯತ್ನಿಸಿದರೆ ಈಗಲೂ ನಮ್ಮ ನಾಡನ್ನು ಹಸಿರು ಮರಗಳ ನಂದನವನ್ನಾಗಿಸಬಹುದು. ಹೌದು, ಈ ಕಾರ್ಯದಲ್ಲಿ ನಿಮ್ಮ ಪ್ರಯತ್ನವೇ ಮುಖ್ಯ. ನೀವು ಒಂದು ಸಸಿ ನೆಡುವ ಮೂಲಕ ನೆರವಾಗಬಹುದು. ಸಾಧ್ಯವಾದರೆ ಇಂದೇ ಒಂದು ಸಸಿ ನೆಡಬಹುದು — ನಿಮ್ಮ ಕೈತೋಟದಲ್ಲಿ, ಹಿತ್ತಲಿನಲ್ಲಿ, ಹೊಲದಲ್ಲಿ, ನಿಮ್ಮ ಶಾಲೆಯ ಕಾಂಪೌಂಡಿನಲ್ಲಿ — ಎಲ್ಲಿ ಬೇಕಾದರೂ. ಒಂದೇ ಸಸಿ ಏಕೆ ಅವಕಾಶವಿದ್ದರೆ ಸಾವಿರಾರು ನೆಡಬಹುದಲ್ಲವೆ ?

ಇದು ತುಂಬಾ ಸುಲಭ. ಏನೂ ಖರ್ಚಿಲ್ಲ ! ಕರ್ನಾಟಕ ಸರ್ಕಾರದ ಅರಣ್ಯ ಇಲಾಖೆ ನೀವು ಸಸಿ ನೆಡಲು ಸಹಾಯ ಮಾಡುವ ಯೋಜನೆಯೊಂದನ್ನು ಜಾರಿಗೆ ತಂದಿದೆ. ಇಲಾಖೆ ನಿಮಗೆ ಸಸಿಗಳನ್ನು, ಬೀಜಗಳನ್ನು ಪೂರೈಸುತ್ತದೆ. ಉಚಿತವಾಗಿ ತ್ವರೆಮಾಡಿ ! ನಿಮ್ಮ ಕೈಲಾದಷ್ಟು ನೆರವು ನೀಡಿ. ನಿಮಗೆ ಹತ್ತಿರವಿರುವ ಅರಣ್ಯ ಇಲಾಖೆಯ ಕಛೇರಿಯನ್ನು ಸಂಪರ್ಕಿಸಿ, ಅಥವಾ ನಮಗೆ ಬರೆಯಿರಿ.

ಅಧಿಕ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
ಸಾಮಾಜಿಕ ಅರಣ್ಯ ಯೋಜನೆ
54, ಅರಣ್ಯ ಭವನ
ಮಲ್ಲೇಶ್ವರ, ಬೆಂಗಳೂರು–560 003

"ಮರಗಳು ನಿಮ್ಮ ಭವಿಷ್ಯ ನಿಧಿ"

ಕರ್ನಾಟಕ ವಾರ್ತೆ

ಬೆಂಗಳೂರು

ಜಿಟಿ ಜಿಟಿ ಮಳೆಯಲ್ಲಿ....

ಡಿಸೆಂಬರ್ 6ರಂದು ಮಧ್ಯಾಹ್ನ 2 ಗಂಟೆಗೆ ಸರ್ಜಾಪುರದಿಂದ ಕಾಲ್ನಡಿಗೆಯಲ್ಲಿ ಹೋರಾಟ ಜಾಥಾ ಮುನ್ಸಿಪಲ್ ಕಚೇರಿ ಎದುರು ಸಂತೆಯಲ್ಲಿ ಬಹಿರಂಗ ಸಭೆ ನಡೆಸಿತು. ಜಿಟಿಜಿಟಿ ಮಳೆಯಲ್ಲೇ ಮುನ್ನಡೆದ ಜಾಥಾ ಸಂಜೆ ರಾತ್ರಿ ಎಂಟುಗಂಟೆಗೆ ಬಳಗೆರೆ ಗ್ರಾಮ ತಲುಪಿತು. ಮುಂಚೆಯೇ ಅನೇಕ ಹಳ್ಳಿಗಳ ಜನರಿಗೆ ಕರಪತ್ರಗಳನ್ನು ಹಂಚಿ ವಿಷದ ಹೆಂಡದ ಬಗ್ಗೆ ತಿಳುವಳಿಕೆ ನೀಡಲಾಗಿತ್ತು.

ದಾರಿಯುದ್ದಕ್ಕೂ ಅಲ್ಲಲ್ಲಿ ಕಲಾಮಂಡಲಿ ಕಾರ್ಯ ನಡೆಸಲಾಗಿತ್ತು. ಬಳಗೆರೆಯಲ್ಲಿ ಅದೇ ದಿನ ಬಹಿರಂಗ ಸಭೆ ನಡೆಯಿತು. ಜಾಥಾ ವರ್ತೂರು, ವೈಟ್‌ಫಿಲ್ಡ್ ಹಾಗೂ ಕೃಷ್ಣರಾಜಪುರಕ್ಕೆ ತಲುಪಿ ಅಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಲಾಯಿತು.

8ರಂದು ಕೃಷ್ಣರಾಜಪುರದಿಂದ ಹೊರಟ ಜಾಥಾ ಬಾಣಸವಾಡಿ ಮಾರ್ಗವಾಗಿ ಫ್ರೇಜರ್ ಟೌನ್, ಶಿವಾಜಿನಗರ ಪ್ರವೇಶಿಸಿತು. ನಂತರ ಕ್ವೀನ್ಸ್ ರಸ್ತೆ ಮುಖಾಂತರ ಪೋಲೀಸ್ ಕಮಿಷನರ್ ಕಚೇರಿ ಎದುರು ಹಾದು ರಾಜಭವನ ಮಹಾರಾಜಾ ಕಾಲೇಜು ಮಾರ್ಗವಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪರಿಷತ್ ಕಚೇರಿಗೆ ಮಧ್ಯಾಹ್ನ ಮೂರು ಗಂಟೆಗೆ ತಲುಪಿತು.

ಜಿ.ಪಿ. ಕಚೇರಿ ಬಾಗಿಲನ್ನು ಪೂರ್ಣವಾಗಿ ಅಡ್ಡಗಟ್ಟಿ ಯಾರು ಕಚೇರಿ ಪ್ರವೇಶಿಸದಂತೆ ಪಿಕೆಟಿಂಗ್



ನಡೆಸಲಾಯಿತು. ಕಾರ್ಯದರ್ಶಿ ಮಹೇಶನ ದಸಂಸ ಬೇಡಿಕೆಗಳನ್ನು ಜಿ.ಪ. ಸಭೆಯಲ್ಲಿ ಮಂಡಿಸುವುದಾಗಿ ಭರವಸೆ ನೀಡಿ ಮನವಿ ಸ್ವೀಕರಿಸಿದರು.

ರಾಜ್ಯ ಸಂಘಟನಾ ಸಂಚಾಲಕ ಎನ್. ವೆಂಕಟೇಶ್ ಅವರು ವಿಷದ ಹೆಂಡ ಮಾರಾಟ ರದ್ದುಪಡಿಸಿ ವಸತಿ, ಶಾಲೆ ಸ್ಥಾಪಿಸಬೇಕು. ಸರ್ಕಾರವನ್ನು ಒತ್ತಾಯಿಸಿದರು.

ಜಾಥಾದ ಉದ್ದಕ್ಕೂ ಜನ ಹೆಚ್ಚು ಕುತೂಹಲದಿಂದ ಭಾಗವಹಿಸುತ್ತಿದ್ದರು ವಿಷದ ಹೆಂಡದ ಪರಿಣಾಮಗಳನ್ನು, ಸರ್ಕಾರದ ಹೆಂಡದ ನೀತಿಯನ್ನು ವಿವರವಾಗಿ ಕೇಳಿ ಛೀಮಾರಿ ಹಾಕುತ್ತಿದ್ದರು.

ಮುನಿಯೆಲ್ಲಪ್ಪ

ಕೋಲಾರ

ಯಾರು ಸತ್ತನ್ರೆ ಅರಿತ ಜಾಥಾ!

ಡಿಸೆಂಬರ 6ರಂದು ತಾಲೂಕು ಕೇಂದ್ರವಾದ ಚಿಂತಾಮಣಿಯಲ್ಲಿ ಬಹಿರಂಗ ಸಭೆ ನಡೆದು ಜಾಥಾ ಪ್ರಾರಂಭವಾಯಿತು. ಹಾಡಗಳನ್ನು ಹಾಡುತ್ತಾ ಸುಮಾರು 200 ಜನ ಸಾಲುಗಟ್ಟಿ ಹೊರಟಾಗ ಬೀದಿಯ ಇಕ್ಕೆಲಗಳಲ್ಲಿ ನಿಂತವರು ಸೋಜಿಗದಿಂದ ಕಣ್ಣರಳಿಸಿದರು. ಹೆಂಡದ ರಾಜ್ಯ ಹೊಗಡೆ ರಾಜ್ಯ, ಹೆಂಡ ಬೇಡ ವಸತಿ ಶಾಲೆ ಕೊಡಿ ಎಂಬ ಘೋಷಣೆಗಳನ್ನು ಕೂಗುತ್ತಾ ಜಾಥಾ ಹೊರಟಿತು. ಜಾಥಾ ನಡೆದಿದ್ದಾಗ ಬೀಳತೊಡಗಿದ ಹನಿಮಳೆಯಲ್ಲೇ ಸರ, ಪತಿಯಂತೆ ಸಾಲು ಸಾಗಿತು. ಸುಮಾರು 13 ಕಿ.ಮೀ ನಡೆದ ಜಾಥಾವು ರಾತ್ರಿ ಕುರುಬೂರಿನಲ್ಲಿ ತಂಗಿತು.

ರಾತ್ರಿ ಈ ಊರಿನಲ್ಲಿ ಈ ಹಿಂದೆ ನಡೆದಿದ್ದ ಘಟನೆಯ ದ್ವೇಷದಿಂದ ಕಾಂಗ್ರೆಸ್ ಗುಂಪೊಂದು ದಸಂಸ ಕಾರಕರ್ತರು ಮಲಗಿದ್ದ ಮನೆಯ ಮೇಲೆ ಕಲ್ಲುಗಳನ್ನು ಎಸೆದರು. ಈ ಬಗ್ಗೆ ನಂತರ ಪೊಲೀಸರಿಗೆ ದೂರು ಸಲ್ಲಿಸಲಾಯಿತು.

7 ರಂದು ಬೆಳಗ್ಗೆ ಕುರುಬೂರಿನಲ್ಲಿ ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಿ ಬಹಿರಂಗ ಸಭೆ ನಡೆಸಲಾಯಿತು. ರಾಜ್ಯ ಸಂಘಟನಾ ಸಂಚಾಲಕ ಎನ್. ವೆಂಕಟೇಶ ಅವರು ಮಾತನಾಡಿದರು. ನಂತರ ಜಾಥಾ ಶೆಟ್ಟಿ ಮಾದ ಮಂಗಲಕ್ಕೆ ಒಂದು ಗಂಟೆಗೆ ತಲುಪಿತು. ಅಲ್ಲಿಯೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಅಲ್ಲಿಂದ ನಡೆದು ಸುಗಟೂರಿಗೆ ಬಂದು ರಾತ್ರಿ ತಂಗಲಾಯಿತು. ದಸಂಸ ಕಾರ್ಯಕರ್ತರು ಗ್ರಾಮದ ಎಲ್ಲಾ ಜನರ ಮನೆಗೆ ಊಟಕ್ಕೆ ಹೋದರು. ರಾತ್ರಿ ಈ ಹಳ್ಳಿಯಲ್ಲೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

8ರ ಬೆಳಿಗ್ಗೆ 9–30 ಗಂಟೆಗೆ ಸುಗಟೂರು ಬಿಟ್ಟು ದಾರಿಯುದ್ದಕ್ಕೂ ತಮಟೆ ಸದ್ದು ಮಾಡುತ್ತಾ, ಹಾಡು ಹೇಳುತ್ತಾ ಜಾಥಾ ಕೋಲಾರಕ್ಕೆ ಬಂದಾಗ ಮಧ್ಯಾಹ್ನ ಒಂದು ಗಂಟೆಯಾಗಿತ್ತು.

o o

ಶ್ರೀನಿವಾಸಪುರ ತಾಲೂಕಿನಿಂದ ಹೊರಟ ಜಾಥಾ ಎರಡು ತಿಂಗಳ ಹಿಂದೆ ದಲಿತರ ಗುಡಿಸಲುಗಳನ್ನು ಸುಟ್ಟು ಹಾಕಿದ್ದ ಮದರಂಕಿಪಲ್ಲಿ ಎಂಬ ಗ್ರಾಮದಿಂದ ಆರಂಭವಾಗಿತ್ತು. ಕೋಲಾರದಿಂದ 60 ಕಿ.ಮೀ. ದೂರದಲ್ಲಿರುವ ಈ ತಾಲೂಕಿನಿಂದ 50 ಜನರ ಜಾಥಾ ಬಂದಿತ್ತು. ಜಾಥಾದಲ್ಲಿ ಮುದುಕರು, ಹುಡುಗರು ಮಕ್ಕಳು, ಮಹಿಳೆಯರೂ ಸೇರಿದ್ದರು. ಡಿಸೆಂಬರ್ 7ರ ರಾತ್ರಿ ಹೊಸೂರು ಗ್ರಾಮದಲ್ಲಿ ತಂಗಿದ ಜಾಥಾ ಮರುದಿನ ಬೆಳಿಗ್ಗೆ ಸಾಂಸ್ಕೃತಿಕ ಕಾರ್ಯಕ್ರಮ ನೀಡಿ ವಾನರಾಶಿ ಗ್ರಾಮದತ್ತ ಹೊರಟಿತು. ಈ ಹಳ್ಳಿಯಲ್ಲಿ ಈ ಹಿಂದೆ ಭೂಮಾಲೀಕರು ಮತ್ತು ದಲಿತರ ಮಧ್ಯೆ ನಡೆದಿತ್ತು. ಹಳ್ಳಿಯ ಜನರು,ಯಾರು ಸತ್ತವ್ರೆ, ಇಂಗೆ ಹೊಗ್ತಾ ಅವ್ರೆ ಎಂದೆಲ್ಲ ಮಾತನಾಡಿಕೊಳ್ಳುತ್ತಿದ್ದರು.

ವಾನರಾಶಿಯಿಂದ ಮರುದಿನ ಬೆಳಿಗ್ಗೆ ಮುದುವಾಡಿ ಹಳ್ಳಿಗೆ ಬಂದಾಗ ಅಲ್ಲಿನ ಜನರು ಜಾಥಾವನ್ನು ಸ್ವಾಗತಿಸಿದರು. ಜಾಥಾ ನಡೆಸುತ್ತಿರುವ ಉದ್ದೇಶ ತಿಳಿಸಿದ ನಂತರ ಜಾಥಾ ಮುಂದೆ ಹೊರಟಿತು. ಬಹಳಷ್ಟು ಜನ ಬಂದು ಜಾಥಾ ಸೇರಿಕೊಂಡ ನಂತರ ಹೊರಟ ಜಾಥಾ ಕೋಲಾರವನ್ನು ಮಧ್ಯಾಹ್ನ ಒಂದು ಗಂಟೆಗೆ ಸೇರಿಕೊಂಡಿತು.

o o o

ಎರಡೂ ಕಡೆಗಳಿಂದ ಬಂದ ಜಾಥಾಗಳು ಕೋಲಾರ ಪ್ರವೇಶಿಸಿದಾಗ ಇನ್ನುಳಿದ ತಾಲೂಕುಗಳಿಂದಲೂ ಜಾಥಾಗಳು ಬಂದಿದ್ದವು. ಮೆರವಣಿಗೆಯು ಜಿಲ್ಲಾ ಪರಿಷತ್ ಕಛೇರಿ ಕಡೆ ಹಾಡು ಘೋಷಣೆಗಳೊಂದಿಗೆ ಸಾಗಿತು.

ಪೊಲೀಸ್ ಪೇದೆಗಳು ಪೊಲೀಸ್ ವ್ಯಾನನ್ನು ಪರಿಷತ ಕಚೇರಿ ಬಾಗಿಲಲ್ಲೇ ನಿಲ್ಲಿಸಿ ಜಾಥಾ ತಡೆಗಟ್ಟಲು ಯತ್ನಿಸಿದರು. ದಲಿತ ಸಂಘರ್ಷ ಸಮಿತಿ ಕಾರ್ಯದರ್ಶಿ ದಿಗ್ಭ್ರಮೆಗೊಂಡರು. ಮಧ್ಯಾಹ್ನ ಊಟದ ಸಮಯವಾಗಿದ್ದರಿಂದಲೋ ಏನೋ ಕಾರ್ಯದರ್ಶಿ ಹಾಗೂ ಜಿ.ಪ. ಸಿಬ್ಬಂದಿಗೆ ಕೋಪ ಬಂದಿತ್ತು.

ಮತ್ತೆ ಮಧ್ಯೆ ಪ್ರವೇಶ ಮಾಡಿದ ಪೊಲೀಸರು ಎರಡು ವ್ಯಾನು ಮೆಟಡೋರ್‌ಗಳಲ್ಲಿ ಕಾರ್ಯಕರ್ತರನ್ನು ತುಂಬಿಕೊಂಡು ಗ್ರಾಮಾಂತರ ಪೊಲೀಸ್ ಠಾಣೆ ಮತ್ತು ಗಲಿಪೇಟೆ ಠಾಣೆಯಲ್ಲಿ ಬಂಧಿಸಿಟ್ಟರು. ಅದೇ ದಿನ ಸಂಜೆ ಎಲ್ಲರನ್ನೂ ಬಿಡುಗಡೆ ಮಾಡಿದರು.

ಎಸ್. ಮುನಿಸ್ವಾಮಿ

ತುಮಕೂರು

ದ.ಸಂ.ಸ. ರಾಜ್ಯ ಸಮಿತಿಯ ಕರೆಯಂತೆ 'ಹೆಂಡ ಬೇಡ ವಸತಿ ಶಾಲೆ ಬೇಕು ಇಂದು' ಎಂದು ಇಲ್ಲಿನ ಜಿಲ್ಲಾ ಪರಿಷತ್ ಕಚೇರಿಯನ್ನು ಸುಮಾರು ಎರಡು ಸಾವಿರಕ್ಕೂ ಹೆಚ್ಚು ದ.ಸಂ.ಸ. ಸದಸ್ಯರು ಪಿಕೆಟಿಂಗ್ ಮಾಡಿದರು. ಬೆ: 11 ಗಂಟೆಯಿಂದ ಪ್ರಾರಂಭವಾದ ಪಿಕೆಟಿಂಗ್ ಸಂಜೆ 3 ಗಂಟೆಯವರೆಗೆ ನಡೆಯಿತು.

ಪಿಕೆಟಿಂಗ್ ಪ್ರಾರಂಭಿಸುವ ಮೊದಲು ಟೌನ್ ಹಾಲಿನಲ್ಲಿ ಬಹಿರಂಗ ಸಭೆ ನಡೆಸಲಾಯಿತು.

ಈ ಮೊದಲು ಡಿ. 6ರಂದು ಪ್ರಾರಂಭವಾದ ಕಾಲ್ನಡಿಗೆ ಜಾಥಾವನ್ನು ಎರಡು ಭಾಗಗಳಾಗಿ ವಿಂಗಡಿಸಲಾಗಿತ್ತು. ಒಂದು ಜಾಥಾ ತಿಪಟೂರಿನಿಂದ ಹೊರಟು ತುರುವೆಕೆರೆ, ಚಿಕ್ಕನಾಯ್ಕನಹಳ್ಳಿ, ಗುಬ್ಬಿ ಮೂಲಕ ಸುಮಾರು 80 ಕಿ.ಮೀ. ಕಾಲ್ನಡಿಗೆಯಲ್ಲಿ ಬಂದು ಜಿಲ್ಲಾ ಕೇಂದ್ರ ತಲುಪಿತು.

ಇದೇ ದಿನ ಮಧುಗಿರಿ ತಾಲೂಕು ಕೊಡಿಗೇನಹಳ್ಳಿಯಿಂದ ಜಾಥಾ [illegible] ಹೊರಟಿತು. 23 ಕಿ.ಮೀ ದೂರದ [illegible] ಅಲ್ಲಿಂದ ಕಾಲ್ನಡಿಗೆಯಲ್ಲೇ 10 ಕಿ.ಮೀ ದೂರದ [illegible]ಸರಹಳ್ಳಿಗೆ ಬಂದು ರಾತ್ರಿ ತಂಗಿತು. [illegible] ಅಲ್ಲಿಂದ ಹೊರಟ [illegible] ಗ್ರಾಮಕ್ಕೆ ಬಂದು ರಾತ್ರಿ ತಂಗಿ[illegible]ನೆಯ ದಿನ ಜಿಲ್ಲಾ ಕೇಂದ್ರ ತಲುಪಿತು.

ಎರಡೂ ಜಾಥಾ ತಂಡಗಳು ಟೌನ್‌ಹಾಲಿನಲ್ಲಿ ಕೂಡಿ ಬಹಿರಂಗ ಸಭೆ ನಡೆಸಿ ನಂತರ ಜಿಲ್ಲಾ ಪರಿಷತ್ ಕಚೇರಿಯನ್ನು ಪಿಕೆಟಿಂಗ್ ಮಾಡಿದವು.

● ಬಿ. ಎಚ್. ಗಂಗಾಧರ್

ಮೈಸೂರು

ಮೈಸೂರು ಜಿಲ್ಲೆಗಳಲ್ಲಿ ಎಚ್.ಡಿ. ಕೋಟೆ, ಹುಣಸೂರು ಕೆ.ಆರ್. ನಗರ ಮತ್ತು ಪಿರಿಯಾಪಟ್ಟಣ ತಾಲೂಕುಗಳಿಂದ ಕಾಲ್ನಡಿಗೆ ಜಾಥಾ ವ್ಯವಸ್ಥೆ ಮಾಡಲಾಗಿತ್ತು.

ಎಚ್.ಡಿ. ಕೋಟೆಯ ಜಾಥಾ ಜಯಪುರಗಳಿಗೆ ಬಂದು ಅಲ್ಲಿ ತಂಗಿದ್ದು ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳೊಡನೆ ಮೈಸೂರಿಗೆ 5 ಕಿ.ಮೀ. ದೂರ ಇರುವ ಶಿವಪುರದಲ್ಲಿ ರಾತ್ರಿ ತಂಗಿತು.

ಹುಣಸೂರು. ಪಿರಿಯಾಪಟ್ಟಣ ಮತ್ತು ಕೆ.ಆರ್. ನಗರಗಳಿಂದ ಹೊರಟಿದ್ದ ಜಾಥಾಗಳು ಬೆಳಕೆರೆಯಿಂದ ಪ್ರಾರಂಭವಾಗಿ ಇನಕಲ್‌ವರೆಗೆ ಬಂದು ತಂಗಿದವು.

10 ರಂದು ಮೈಸೂರು ಕಡೆ ಸಾಗಿದ ಜಾಥಾಗಳಲ್ಲಿ ವಿಷದ ಹೆಂಡ ಬೇಡ, ವಸತಿ ಶಾಲೆ ಬೇಕು, ಹೆಗಡೆ ರಾಜ್ಯವೊ, ಹೆಂಡದ ರಾಜ್ಯವೊ, ಕುರಿಕೋಳಿ ಕೊಟ್ಟಿದ್ದು ಸಾಕು, ಹೋಬಳಿಗೊಂದು ವಸತಿ ಶಾಲೆ ಬೇಕು ಎಂಬ ಘೋಷಣೆ ಮುಗಿಲು ಮುಟ್ಟುತ್ತಿದ್ದವು. ಹೋರಾಟದ ಹಾಡುಗಳನ್ನು ಹಾಡುತ್ತಾ, ಬಹಿರಂಗ ಸಭೆಗಳನ್ನು ನಡೆಸುತ್ತ, ಹೆಂಡದ ವಿರುದ್ಧ ಜನರಿಗೆ ತಿಳಿ ಹೇಳಲಾಗುತ್ತಿತ್ತು.

ಮೈಸೂರಿನ ಟೌನ್ ಹಾಲ್‌ಗೆ ಬಂದ ಜಾಥಾಕ್ಕೆ ಸಾವಿರಾರು ಜನರು ಸೇರಿಕೊಂಡರು. ಅಲ್ಲಿಂದ ಹೊರಟ ಮೆರವಣಿಗೆಯು ಮತ್ತೆ ಹೊಸ ಸಯ್ಯಾಜಿ ರಾವ್ ರಸ್ತೆ, ನೂರಡಿ ರಸ್ತೆ ಮೂಲಕ ಜಿ.ಪ. ಕಚೇರಿ ಮುಟ್ಟಿತು. ಕಚೇರಿಯ ಎಲ್ಲ ಬಾಗಿಲುಗಳಲ್ಲೂ ಕಾರ್ಯಕರ್ತರು ಪಿಕೆಟಿಂಗ್ ನಡೆಸಿದರು.

ತೆರೆದ ಅಂ[illegible]

ಇವರಿಗೆ

[illegible]

ಕನ್ನಡ ವಿಭಾಗ

[illegible]

ದಕ್ಷಿಣ ಕನ್ನಡ

ಬೆಂಡಿಗೇಯ ಅಮಾನವ ಮಲ ತಿನ್ನಿಸಿದ ಪ್ರಕರ[illegible] ಮತು ಜನತಾ ಸರ್ಕಾರದ ಹೆಂಡದ ನೀತಿ ವಿರೋಧಿ[illegible] ಜಿಲ್ಲಾ ಪರಿಷತ್ ಕಚೇರಿಯ ಎದುರು ಪಿಕೆಟಿಂಗ್ ನಡೆಯಿತು. ಪಿಕೆಟಿಂಗ್ ನಡೆಸುತ್ತಿದ್ದ ದ.ಸಂ.ಸ[illegible] ಸದಸ್ಯರನ್ನು ಪೊಲೀಸರು ಬಂಧಿಸಿ ನಂತರ ಬಿಡುಗ[illegible] ಮಾಡಿದರು.

ನಂತರ ಸಂಜೆ ನಗರದ ನೆಹರೂ ಮೈದಾನದ[illegible] ಬಹಿರಂಗ ಸಭೆ ನಡೆಯಿತು. ಸಭೆಯಲ್ಲಿ ಡಾ॥ ದಯ[illegible]ನಂದ ಮಾನೆ.ಜಿಲ್ಲಾ ಸಂಚಾಲಕ ಡಿ.ಬಿ.ಸಾಲಿಯಾನ್[illegible] ಎಂ. ದೇವದಾಸ್ ಮಾತನಾಡಿದರು. ಹೆಗಡೆ ಸರ[illegible]ರದ ವಿಶೇಷ ಕೊಡುಗೆಯಾದ ವಿಷದ ಹೆಂಡ ಕುರಿ[illegible] ಕಲಾಮಂಡಳಿ 'ಜನತಾ ಪುರಾಣ' ಎಂಬ ನಾಟ[illegible] ಪ್ರದರ್ಶಿಸಿತು.

ಎಂ.ದೇವದಾ[illegible]

(9ನೇ ಪುಟದಿಂದ)

ಎಂಬಿತ್ಯಾದಿ ಪ್ರಶ್ನೆಗಳನ್ನು ಅವರು ಮುಂದಿಟ್ಟಿದ್ದಾರೆ.

ಆದರೆ ಕೂಪಮಂಡೂಕ ಪ್ರವೃತ್ತಿಯ ಹಿಂದೂ ಮನಸು ಉದಾತ್ತವೂ, ತರ್ಕಬದ್ಧವೂ ಜ್ಞಾನದ ಬೆಳಕಿನತ್ತ ಕೊಂಡೊಯ್ಯುವ ಪ್ರಶ್ನೆಗಳನ್ನು ಎದುರಿಸದೆ ತನ್ನ ಮೈ ತಾನೇ ಪರಚಿಕೊಳ್ಳುವ ಹಂತಕ್ಕಿಳಿದಿದೆ ತನ್ನೊಳಗೆ ತಾನು ಇಣಿಕಿ ನೋಡಿಕೊಳ್ಳಲು ಭಯ ಪಡುವ ಹಿಂದೂ ಮನಸು ತನ್ನ ಮಾರ್ಗದರ್ಶಿಯಾಗ ಬಯಸುವ ಜೀವಿಗಳನ್ನೂ ಹೊಸಕಿ ಹಾಕ ಬಯಸುತ್ತದೆ ಕತ್ತಲೆಯ ಕೂಪದಲ್ಲಿರುವ ಈ ಮನಸಿಗೆ ಬೆಳಕಿನ ಸೊಡರು ಕಂಡಾಕ್ಷಣ ಕಣ್ಣು ಕೋರೈಸಿದಂತಾಗುತ್ತದೋ ಏನೋ. ಹಾಗಾಗಿ ಅದು ಈ ಬೆಳಕಿನ ಸೊಡರನ್ನೇ ಹೊಸಕಿ ಹಾಕಲು ದಾಪುಗಾಲು ಹಾಕುತ್ತಿದೆ; ಅರ್ಥಾತ್ ಕತ್ತಲೆಯ ಲೋಕದಲ್ಲೇ ಉಳಿಯ ಹೆಮ್ಮೆಯಿಂದ ಬೀಗಬಯಸುತ್ತದೆ; ಇಷ್ಟೊಂದು ಅವಿವೇಕಿ ಮನಸು ಈ ಹಿಂದೂ ಮನಸು.

ಪುಸ್ತಕದ ಬಗ್ಗೆ ಮರು ವಿಮರ್ಶೆ ನಡೆಸಲು 'ಡಾ॥ ಬಾಬಾಸಾಹೇಬ್ ಅಂಬೇಡ್ಕರ್ ಸಮಗ್ರ ಸಾಹಿತ್ಯ ಪ್ರಕಟನಾ ಸಮಿತಿ'ಯ ಸಭೆ ಕರೆಯಲಾಗುವುದು ಎಂಬ ಮಹಾರಾಷ್ಟ್ರದ ಶಿಕ್ಷಣಸಚಿವ ರಾಂಮೇಗೆ ಅವರ ಹೇಳಿಕೆಗೆ ಯಾವ ಬೆಲೆಯೂ ಸಿಕ್ಕಿಲ್ಲ. ಪುಸ್ತಕ ಪ್ರಕಟಣೆಯ ಸಮಿತಿಯ ಸಂಪಾದಕ ಮಂಡಳಿಯಿಂದ ಈಗಾಗಲೇ ಮೂವರು ಸದಸ್ಯರು ರಾಜೀನಾಮೆ ನೀಡಿ ಹೊರ ಬಿದ್ದಿದ್ದಾರೆ. ಪ್ರೊ॥ ಅರುಣ ಕಾಂಬಳೆ, ಬಾಲಚಂದ್ರ ಫಡಕೆ, ಹಾಗೂ ಎಸ್.ಎಸ್. ರೇಗೆ ಕೂಡ ರಾಜೀನಾಮೆ ಸಲ್ಲಿಸಿ ಸರ್ಕಾರದ ಕ್ರಮವನ್ನು ಖಂಡಿಸಿದ್ದಾರೆ.

ಹಿಂದೂ ಸನಾತನವಾದಿಗಳ ಮುಂದೆ ಡೊಗ್ಗಾಲೂರಿ ಕುಳಿತಿರುವ ಮಹಾರಾಷ್ಟ್ರ ರಾಜ್ಯ ಸರ್ಕಾರಕ್ಕೆ ಜಾತ್ಯಾತೀತ ಮೌಲ್ಯಗಳ ಮಹತ್ವನ್ನು ತಿಳಿಸಲೆಂದು ರಾಜ್ಯದ ವಿವಿಧ ಭಾಗಗಳ ದಲಿತ ಸಂಘಟನೆಗಳು ಒಂದುಗೂಡುತ್ತಿವೆ. ಔರಂಗಾಬಾದ್‌ನಲ್ಲಿ ನವೆಂಬರ್ ಕೊನೆಯ ವಾರದಲ್ಲಿ ನಡೆದ ವಿಶಾಲ ಆಂದೋಲನದಲ್ಲಿ ಸರ್ಕಾರಕ್ಕೆ ತೀವ್ರತರ ಎಚ್ಚರಿಕೆ ನೀಡಲಾಗಿದೆ. ದಲಿತ್ ಪ್ಯಾಂಥರ್ಸ್‌ನ ಬಹುತೇಕ ಎಲ್ಲಾ ಬಣಗಳು, ದಲಿತ ಮುಕ್ತಿ ಸೇನಾ, ಮಾಸ್ ಮೂವ್‌ಮೆಂಟ್ ಹಾಗೂ ಭಾರತೀಯ ರಿಪಬ್ಲಿಕನ್ ಪಕ್ಷದ ಹಲವು ಗುಂಪುಗಳು ಈಗಾಗಲೇ ಪರ್ಭಾ, ಅಮರಾವತಿ, ಅಕೋಲಾ ಬುಲ್‌ಢಾಣಾ, ವಾಶಿಂ, ಮಲ್ಕಾಪೂರ, ಚಂದ್ರಾಪುರ, ಗಡಚಿರೋಲಿ, ಜಳಗಾಂವ್, ಮನ್ಮಾಡ್, ಔರಂಗಾಬಾದ್, ನಾಂದೇಡ್, ಪರಭಣಿ, ಉಸ್ಮಾನಾಬಾದ್, ಬೀಡ್, ಹೀಗೆ ನೂರಾರು ಕಡೆ ಪ್ರತಿಭಟನಾ ಚಳವಳಿ ಆರಂಭಿಸಿವೆ.

ಮಹಾರಾಷ್ಟ್ರದ ಕಮ್ಯುನಿಸ್ಟ್ ಪಕ್ಷಗಳು, ಸಮಾಜವಾದಿ ಶಕ್ತಿಗಳು ಹಾಗೂ ಪ್ರಗತಿಪರ ವಿಚಾರದ ಬುದ್ಧಿಜೀವಿ ವರ್ಗ ದಲಿತರ ಪರವಾಗಿ ನಿಂತಿರುವಾಗ ನಿ[illegible]ಕ್ಷೆಯಂತೆ ಭಾರತೀಯ ಜನತಾ ಪಕ್ಷ ಧರ್ಮಾ[illegible] ಹಿಂದೂ ಮರಾಠಾ ಮಹಾಸಂಘವನ್ನು ಬೆಂಬಲಿಸಿ[illegible]

ಹತ್ತು ವರ್ಷಗಳ ಹಿಂದೆ (1978) ನಡೆ[illegible] 'ನಾಮಾಂತರ ಚಳವಳಿ'ಯ ಕರಾಳ ಛಾಯೆ ಮ[illegible] ಮಹಾಷ್ಟ್ರದ ಮೇಲೆ ಬೀಳಲಿದೆಯೇ ? ಸಚಿವ ಸಂ[illegible]ದಲ್ಲಿ ತಾನೇ ಸ್ವೀಕರಿಸಿದ್ದ ನಿರ್ಣಯನ್ನು ಜಾ[illegible] ತೆಯವಲ್ಲಿ ಹಿಂಜರಿದ ಹೇಡಿ ನೀತಿಯನ್ನೇ ಚವಾ[illegible] ಸರ್ಕಾರವೂ ಅನುಸರಿಸೀತೇ ? ಹಳ್ಳಿಗಾಡಿನ ಅ[illegible]ಯಕ ದಲಿತರ ಕಗ್ಗೊಲೆಗೆ ಎಳಸಿದ ಮತಿಗೇಡಿ ಹಿಂ[illegible] ಮನಸು ಮತ್ತೆ ತನ್ನ ಕಟ್ಟರ್‌ವಾದ ಎತ್ತಿ ಹಿ[illegible] ಮೆರೆದೀತೇ ?

ಮಹಾರಾಷ್ಟ್ರದ ಗುಪ್ತಚರ ವಿಭಾಗ ಸಂಗ್ರಹಿ[illegible] ಮಾಹಿತಿ ಪರಿಗಣಿಸಿಯಾದರೂ ಚವಾಣ್ ಸರ[illegible] ವಿವೇಕ ದೃಷ್ಟಿಯಿಂದ ಇಡೀ ಪ್ರಕರಣವನ್ನು ಪ[illegible]ಲಿಸಬೇಕು. ಕೇವಲ ಮಹಾರಾಷ್ಟ್ರ ರಾಜ್ಯದಲ್ಲ[illegible] ಅಲ್ಲ, ನೆರೆ ರಾಜ್ಯಗಳಾದ ಆಂಧ್ರ, ಕರ್ನಾಟಕ, ಮ[illegible] ಪ್ರದೇಶಗಳಲ್ಲಿನ ದಲಿತ ಸಂಘಟನೆಗಳು '[illegible] ಹಕ್ಕು' ಉಳಿಸಿಕೊಳ್ಳಲು ಸನ್ನದ್ಧವಾಗು[illegible] ಮತ್ತೊಂದು ಭೀಕರ ಜಾತಿ ಗಲಭೆಯನ್ನು [illegible]ದಿರುವ ವಿವೇಕವನ್ನಾದರೂ ಮಹಾರಾಷ್ಟ್ರ ಸರ[illegible] ತೋರೀತೇ ?

ಸಂಪಾದಕ/ಪ್ರಕಾಶಕ/ಮುದ್ರಕ: ರಂಗಸ್ವಾಮಿ ಬೆಲ್ಲದಮಡು, 2ಬಿ, ಮಹದೇಶ್ವರ ನಿಲಯ, 2ನೇ ಕ್ರಾಸ್, 2ನೇ ಮೈನ್, ಎ.ಕೆ. ಕಾಲನಿ, ಹೊಸಳ್ಳಿ, ಬೆಂಗಳೂರು
ಮುದ್ರಣ : ಪೃಥ್ವಿ ಪ್ರಕಾಶನ ಲಿಮಿಟೆಡ್, ವಿಜಯನಗರ, ಬೆಂಗಳೂರು-49